


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 313 | Friday 03-05-2024 | E-mail : maruti.b.hosamani76@gmail.com | Page: 4 | Price : Rs. 1/-


## ಮ್ಯಾರಥಾನ ಓಟದ ಮೂಲಕ ಮತದಾನ ಜಾಗೃತಿ, ಗಂಗಾಧರ್ ಕಂದಕೂರ





**ಬೈಲಹೊಂಗಲ :** ಬೈಲಹೊಂಗಲ ತಾಲೂಕಾ ಆಡಳಿತ ಸ್ವೀಪ್ ಸಮಿತಿ ಆಶ್ರಯದಲ್ಲಿ ಮತದಾನ ಜಾಗೃತಿ ಬಗ್ಗೆ ಮ್ಯಾರಥಾನ್ ಓಟವನ್ನು ಹಮ್ಮಿಕೊಂಡು ಮಾತನಾಡಿದ ಸ್ವೀಪ್ ಸಮಿತಿ ಅಧ್ಯಕ್ಷರಾದ ಶ್ರೀ ಗಂಗಾಧರ್ ಕಂದಕುರ ರವರು ಹಸಿರು ನಿಶಾನೆ ತೋರಿಸಿ ಮಾತನಾಡಿ ಮ್ಯಾರಾಥಾನ ಓಟವು ಚನ್ನಮ್ಮ ಮಹಾದ್ವಾರ ದಿಂದ ಸಂಗೊಳ್ಳಿ ರಾಯಣ್ಣ ಸರ್ಕಲ್ ಮಾರ್ಗವಾಗಿ ಜವಳಿ ಕೂಟದ ಮುಲಕ ಇಂದಿರಾ ನಗರದ ವರೆಗೆ ಆಯೋಜಿಸಲಾಗಿದ್ದು ನಗರದ ಜನರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕೆಂದು ಕರೆ ನೀಡಿದ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ಅತೀ ಕಡಿಮೆ ಮತದಾನವಾದ ಉದ್ದೇಶದಿಂದ ಈ ಪ್ರಸ್ತುತ ಮ್ಯಾರಾಥಾನ್ ಓಟವನ್ನು ಹಮ್ಮಿಕೊಂಡಿದ್ದು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎಲ್ಲಾರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸಬೇಕು ಪ್ರತೀಶತ 100/ ಮತ ಚಲಾಯಿಸುವಲ್ಲಿ ಶ್ರಮಿಸಬೇಕೆಂದರು ಪುರಸಭೆಯ ಮುಖ್ಯಧಿಕಾರಿ ವಿರೇಶ ಹಸಬಿ ಸಹಾಯಕ ನಿರ್ದೇಶಕ
ವಿಜಯ ಪಾಟೀಲ, ಸಂಗಮೇಶ ಸವದತ್ತಿಮಠ ಪರಿವಿಕ್ಷಕರು ಎಸ್ ಜಿ ಹೊರಟ್ಟಿ ಎಸ್ ಬಿ ಸಂಗನಗೌಡರ್ ಎಸ್ ವ್ಹಿ ಹಿರೇಮಠ, ತಾ ಪ ಸಿಬ್ಬಂದಿ ಶಿಕ್ಷಣ ಇಲಾಖೆ ಸಿಬ್ಬಂದಿ ಮತ್ತು ಸಾರ್ವಜನಿಕರು ಕಾರ್ಯಕ್ರಮ ಯಶಸ್ವಿಗೊಳಿಸಿದರು ವಿಜೇತರಿಗೆ ಸ್ವೀಪ್ ಸಮಿತಿಯಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಂ.ಎಂ. ಶರ್ಮಾ ಬೆಳಗಾವಿ**

## ದೇಶವನ್ನು ಅಧೋಗತಿಗೆ ತಂದಿರುವ ಬಿಜೆಪಿ ಕೇಂದ್ರ ಸರ್ಕಾರ: ಸಚಿವ ಬಿ. ನಾಗೇಂದ್ರ





**ಕಾನಾ ಹೊಸಹಳ್ಳಿ :** ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೈ ಪಕ್ಷದ ಅಭ್ಯರ್ಥಿ ಈ. ತುಕಾರಾಂ ಪರವಾಗಿ ಜಿಲ್ಲಾ ಸಚಿವ ಬಿ.ನಾಗೇಂದ್ರ ಅವರ ಹಾಗೂ ಕೂಡ್ಲಿಗಿ ಶಾಸಕ ಡಾ ಎನ್ ಟಿ ಶ್ರೀನಿವಾಸ್ ಕ್ಷೇತ್ರ ವ್ಯಾಪ್ತಿಯ ಕಾನ ಹೊಸಹಳ್ಳಿ ಪಟ್ಟಣದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ನಂತರ ಪಟ್ಟಣದ ಮುಖ್ಯ ರಸ್ತೆ ಹಿರಂಗ ಪ್ರಚಾರ ಮತ್ತು ರೋಡ್ ಶೋ ನಡೆಸುವ ಮೂಲಕ ಮತ ಯಾಚನೆ ಮಾಡಿದರು. ಇದೇ ವೇಳೆ ಸಚಿವ ಬಿ.ನಾಗೇಂದ್ರ ಅವರು ಮಾತನಾಡಿ, ನಾನು ಕೂಡ್ಲಿಗಿ ಕ್ಷೇತ್ರದ ಜನರ ಆಶೀರ್ವಾದ ದಿಂದ ನಾನು 2008 ಹಾಗೂ 2013 ರಲ್ಲಿ ಎರಡು ಬಾರಿ ಗೆದ್ದು ಶಾಸಕನಾಗಿ, ಕೂಡ್ಲಿಗಿ ಕ್ಷೇತ್ರದ ಜನರ ಆಶೀರ್ವಾದ ದಿಂದ ಈಗ ಬಳ್ಳಾರಿ ಕ್ಷೇತ್ರದಲ್ಲಿ ಗೆದ್ದು ಮಂತ್ರಿಯಾಗಿದ್ದೇನೆ. ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ವರ್ಷಕ್ಕೆ ಒಂದು ಕುಟುಂಬಕ್ಕೆ ಒಂದು ಲಕ್ಷ ಗ್ಯಾರೆಂಟಿ ಯೋಜನೆಯ ಹಣ ದೊರೆಯಲಿದೆ. ವಿಧಾನ ಸಭಾ ಚುನಾವಣೆಯಲ್ಲಿ ನೀಡಿದ ಮಾತಿನಂತೆ ಪಂಚ ಗ್ಯಾರೆಂಟಿಗಳನ್ನ ನೀಡುವ ಮೂಲಕ ಮಹಿಳೆಯರು, ಬಡವರು, ದೀನ ದಲಿತರ ಧ್ವನಿ ಯಾಗಿದ್ದೇವೆ. ನಮ್ಮ ದೇಶವನ್ನು ಅಧೋಗತಿಗೆ ತಂದಿರುವ ಬಿಜೆಪಿ ಪಕ್ಷ-ಕ್ಕೆ ಮತವನ್ನು ಕೊಡಬಾರದು. ಅಧರ್ಮ ಪಕ್ಷ ಗೆಲ್ಲಲು ಸಾಧ್ಯವಿಲ್ಲ. ಕೊಟ್ಟ ಮಾತಂತೆ ನಡೆದುಕೊಂಡ ವ್ಯಕ್ತಿಯಾರಾದ್ರು ಇದ್ರೆ ಅದು ನಮ್ಮ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಮಾತ್ರ ಹಾಗಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಪಕ್ಷದ ಜನರು ಬರುತ್ತಾರೆ ಅವರ ಆಮಿಷಕ್ಕೆ ಬಲಿಯಾಗದೆ. ಈ ಬಾರಿ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಈ. ತುಕಾರಾಂ ಅವರು ಸೋಲಿಲ್ಲದ ಸರದಾರರು, ನಾಲ್ಕು ಬಾರಿ ಶಾಸಕರಾಗಿ, ಯಾವುದೇ ಕಳಂಕ ವಿಲ್ಲದಂತಹ ಸಂಸತ್ತಿನಲ್ಲಿ ಬಳ್ಳಾರಿ ಜಿಲ್ಲೆಯ ಜನರ ಪರ ಧ್ವನಿಯಾಗುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಹೆಚ್ಚಿನ ಬಹುಮತ ದಿಂದ ಗೆಲ್ಲಿಸುವಂತೆ ಮತದಾರರಿಗೆ ಮನವಿ ಮಾಡಿದರು.
ಈ ವೇಳೆ ಕೂಡ್ಲಿಗಿ ಕ್ಷೇತ್ರದ ಶಾಸಕರಾದ ಡಾ. ಎ ನ್ ಟಿ ಶ್ರೀನಿವಾಸ್ ಮಾತನಾಡಿ ನನ್ನ ಗೆಲುವಿನ ಅಂತರಕ್ಕಿಂತ ಹೆಚ್ಚಿನ ಮತಗಳ ಮೂಲಕ ಲೋಕಸಭಾ ಚುನಾವಣೆ ಅಭ್ಯರ್ಥಿ ಈ. ತುಕರಾಮ್ ಅವರನ್ನು ಲೋಕಸಭಾ ಸದಸ್ಯರನ್ನಾಗಿ ನಾವೆಲ್ಲರೂ ಸೇರಿ ಅವರನ್ನು ಆಯ್ಕೆ ಮಾಡಿ ಕಳಿಸಬೇಕು. ನಮ್ಮ ಅಖಂಡ ಜಿಲ್ಲೆಯ ಪರವಾಗಿ ಧ್ವನಿ ಯೆತ್ತುವುದಕ್ಕೆ ನಮ್ಮ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಿಂದ ಹೆಚ್ಚಿನ ಅಂತರ ಕೊಡಬೇಕು ಎಂದರು. ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಸರ್ಕಾರದ ನಮ್ಮ ಸರ್ಕಾರ ಜನ ಪರವಾದಂತಹ ಸರ್ಕಾರ.
ಅದಕ್ಕೆ ಈ ಬಾರಿ ನಮ್ಮ ಕ್ಷೇತ್ರ ಅಭಿವೃದ್ಧಿಯತ್ತ ಕೊಂಡೊಯ್ಯುವುದಕ್ಕೆ ಲೋಕಸಭಾ ಚುನಾವಣೆ ಅಭ್ಯರ್ಥಿಯಾದ, ಈ. ತುಕಾರಾಮ್ ಅವರಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡ ಬೇ-ಕೆಂದು ಕ್ಷೇತ್ರದ ಜನತೆಗೆ ಮನವರಿಕೆ ಮಾಡಿದರು. ಈ ಸಂದರ್ಭದಲ್ಲಿ ಹೊಸಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್ ಗೌಡ್ರು, ಕಾಂಗ್ರೆಸ್ ಹಿರಿಯ ಮುಖಂಡ ವೆಂಕಟೇಶ್, ಎನ್ ಟಿ ತಮ್ಮಣ್ಣ, ನಾಗಮಣಿ ಜಿಂಕಲ್, ಸಚಿವರ ಸೋದರ ವೆಂಕಟ್ ಪ್ರಸಾದ್, ಜಿ ಓಬಣ್ಣ, ಕಾವಲಿ ಶಿವಪ್ಪ ನಾಯಕ, ರಫಿಕ್ ಚನ್ನಬಸಪ್ಪ, ಎರ್ರಿಸ್ವಾಮಿ, ಕಾನಮಡುಗು ಜೆ ಈ ಶರಣಪ್ಪ . ಮುರಳಿ ಕೃಷ್ಣ, ಇಮಾಮ್ ಸಾಬ್, ಎಸಿ ಚೇತನ್ ಗ್ರಾ.ಪಂ ಅಧ್ಯಕ್ಷ, ಎಳೆನೀರು ಗಂಗಣ್ಣ, ದುರ್ಗೇಶ್ ಬಿಟಿ ಗುದ್ದಿ, ಜಗದೀಶ್, ಗಬ್ಬರ್, ಪಿಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸತೀಶ್, ಸೂರ್ಯಪ್ರಕಾಶ್, ಫೋಟೋ ಸಿದ್ದಲಿಂಗಪ್ಪ, ವೈ ಎಂ ವೀರೇಶ್ವರಯ್ಯ, ಮಂಜುನಾಥ ಬಿ. ಕಾನಮಡುಗು. ಅರುಣ್ ಕುಮಾರ್ ಹೊಸಮನೆ .ಹೊಸಹಳ್ಳಿ ಬ್ಲಾಕ್ ಕಾಂಗ್ರೆಸ್ ಪ್ರದಾನ ಕಾರ್ಯದರ್ಶಿ ಮನೋಜ್ ಕುಮಾರ್ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಇತರರು ಇದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ. ಎಸ್.ವೀರೇಶ್. ಕಾನಾ ಹೊಸಹಳ್ಳಿ**

## ಇಂಡಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆ ಸೇವೆ ಆರಂಭ



**ಇಂಡಿ:** ಕಳೆದ 15 ವರ್ಷಗಳಿಂದ ಇಂಡಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರು ಹಾಗೂ ಅರಿವಳಿಕೆ ತಜ್ಞರು ಇರದ ಕಾರಣ ಒಂದೇ ಒಂದು ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಿರಲಿಲ್ಲ. ಇತ್ತೀಚೆಗೆ ಪ್ರಸೂತಿ ತಜ್ಞರನ್ನು ಸರಕಾರ ನೇಮಕ ಮಾಡಿದ್ದು ಮಂಗಳವಾರ ವೈದ್ಯರು ಸಿಸೇರಿಯನ್ ಹೆರಿಗೆ ಮಾಡಿಸಿದ್ದಾರೆ. ಇಬ್ಬರು ತೊಡಕಿನ ಗರ್ಭಿಣಿಯರಿಗೆ ಸಿಸೇರಿಯನ್ ಶಸ್ತ್ರ ಚಿಕಿತ್ಸೆಗೆ ಮಾಡುವ ಮೂಲಕ ಸ್ತ್ರೀ ರೋಗ ತಜ್ಞೆ ಡಾ. ಸುಚೇತಾ ಆಕಾಶ, ಅರಿವಳಿಕೆ ತಜ್ಞ ಡಾ.ಸತೀಶಮದುಬಾವಿ,ಚಿಕ್ಕಮಕ್ಕಳತಜ್ಞಡಾ.ವಿಪುಲ್ ಕೊಳೆಕರ ಸಿಸೇರಿಯನ್ ಮಾಡಿದರು. ಶಸ್ತ್ರ ಚಿಕಿತ್ಸೆಯ ಸಮಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ ಉಪಸ್ಥಿತರಿದ್ದು ಸಹೋದ್ಯೋಗಿ ಸಿಬ್ಬಂದಿಗಳಿಗೆ ಬೆಂಬಲ ನೀಡಿದರು. ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ. ಈರಣ್ಣ ಧಾರವಾಡಕರ ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರಿಗೆ ಅಭಿನಂದಿಸಿ. ಇನ್ನೂ ಮುಂದೆ ಸತತವಾಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು. ಡಾ. ಪ್ರವೀಣ ಗಜಾಕೋಶ, ಡಾ.ಪ್ರೀತಿ ಕೋಳೇಕರ, ಡಾ.ಅಮೀತ್ ಕೋಳಕರ ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಪ್ಪ.ಬಿ.ಹರಿಜನ. ಇಂಡಿ**

## ಯಲಗೋಡ ಗ್ರಾಮದಲ್ಲಿ ಕಾಂಗ್ರೆಸ್ ಪರ ಬಿರುಸಿನ ಪ್ರಚಾರ



**ಯಲಗೋಡ :** ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮದಲ್ಲಿ ವಿಜಯಪುರ ಜಿಲ್ಲೆಯ ಮೀಸಲು ಕ್ಷೇತ್ರದ ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯಾದ ರಾಜು ಆಲಗೂರ ಅವರ ಪರ ಮತ ಯಾಚನೆ ಮಾಡಿದ, ಗ್ರಾಮ ಮುಸ್ಲಿಮರ ಸಮಾಜದ ಮುಖಂಡರಿದ ಕಾಂಗ್ರೆಸ್ ಪಕ್ಷದ ಪರ ಮನೆ ಮನೆಗೆ ಹೋಗಿ ಕರ್ನಾಟಕ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಹಾಗೂ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಬಗ್ಗೆ ಗ್ರಾಮದ ಜನರಿಗೆ ಸವಿ ಸ್ತಾರವಾಗಿ ಕಾಂಗ್ರೆಸ್ ಪಕ್ಷದ ನುಡಿದಂತೆ ನಡೆದ ಸರ್ಕಾರ ಬಡವರ ಪಕ್ಷ ಕಾಂಗ್ರೆಸ್ ಪಕ್ಷ ಎಂದು ಹೇಳುವ ಮೂಲಕ ,ಈ ಮತ ಯಾಚನೆಯ ನೇತೃತ್ವ ವಹಿಸಿದ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಮಹಮ್ಮದ್ ರಫೀಕ್ ಕಣಮೇಶ್ವರ,ಮೈಬೂಬ ಕಣಮೇಶ್ವರ ಹಾಗೂ ಗ್ರಾಮ ಮುಸ್ಲಿಮ್ ಸಮಾಜದ ಯುವಕರು ಹಾಗೂ ಮಹಿಳೆಯರು ಕೂಡಿ ಬೃಹತ್ ಮಟ್ಟದಲ್ಲಿ ರಾಜು ಆಲಗೂರ ಅವರು ಪರ ಮತ ಯಾಚನೆ ಮಾಡಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ. ಹಚ್ಯಾಳ ದೇವರ ಹಿಪ್ಪರಗಿ**

## ವಿದ್ಯಾಗಿರಿಯಲ್ಲಿ ಬಿಜೆಪಿ ಪಾದಯಾತ್ರೆ

### ತುಷ್ಟೀಕರಣ ನೀತಿ ಇದು ಕಾಂಗ್ರೆಸ್ಸಿನ ಸಾಧನೆ: ಭಾಂಡಗೆ

**ಬಾಗಲಕೋಟೆ :** ದೇಶದಲ್ಲಿ ಒಂದೆ ಸಮುದಾಯವನ್ನು ಓಲೈಸುವ ಮೂಲಕ ತುಷ್ಟಿಕರಣ ನೀತಿಯನ್ನು ಅನುಸರಿಸುತ್ತಾ ಬಂದಿರುವುದೆ ಕಾಂಗ್ರೆಸ್ಸಿನ ಸಾಧನೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.
ನಗರದ ವಿದ್ಯಾಗಿರಿಯಲ್ಲಿ ಶುಕ್ರವಾರ ಲೋಕಸಭಾ ಚುನಾವಣಾ ಪ್ರಚಾರದ ನಿಮಿತ್ಯ ಭಾರತೀಯ ಜನತಾ ಪಾರ್ಟಿ ಹಮ್ಮಿಕೊಂಡ ಪಾದಯಾತ್ರೆಯಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಮಾತನಾಡಿದರು.
ಯಾರು ಎಷ್ಟೆ ಮೋದಿಯವರ ಬಗ್ಗೆ ಅಪಪ್ರಚಾರ ಮಾಡಿದರೂ ಕೋನೆಗೆ ಗೆಲ್ಲುವುದು ಮೋದಿನೆ ಇದನ್ನು ಯಾರೂ ತಡೆಯುವುದಕ್ಕೆ ಆಗೋದಿಲ್ಲಾ, ಬರಿ ಸುಳ್ಳುಗಳನ್ನು ಹೇಳುತ್ತಾ 70 ವರ್ಷ ದೇಶವನ್ನಾಳಿದ ಕಾಂಗ್ರೆಸ್ಸ ಬಡವರನ್ನು ಬಡವರನ್ನಾಗಿಯೆ ಇಟ್ಟು, ಜಾತಿ ಜಾತಿಗಳ ಮಧ್ಯ ಸಂಘರ್ಷ ಉಂಟುಮಾಡಿ ಹಿಂದುಗಳನ್ನು ಒಡೆಯುವ ಹುನ್ನಾರದ ಜೋತಗೆ ಮುಸ್ಲಿಂರನ್ನು ಓಲೈಸುತ್ತಾ ತಮ್ಮ ಮತ ಬ್ಯಾಂಕ ಗಟ್ಟಿಗೋಳಿಸುತ್ತಾ ಬಂದಿರುವುದೆ ಕಾಂಗ್ರೆಸ್ಸಿನ ತುಷ್ಟೀಕರಣ ನೀತಿಯ ಬಹುದೊಡ್ಡ ಸಾಧನೆ ಎಂದ ಅವರು ಪ್ರಧಾನಿ ಮೋದಿಯವರ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೇಸ್ಸಿಗಿಲ್ಲಾ ಅವರ ಪ್ರಣಾಳಿಕೆಯ ಮುಖವಾಡಗಳು ಒಂದೊಂದಾಗಿ ಕಳಚಿ ಬಿಳುತ್ತಿವೆ, ದೇಶದ ಪರವಾಗಿ ಯಾರು ಇದ್ದಾರೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳಬೇಕು, ದೇಶದ ಸುರಕ್ಷತೆ ಹಿಂದೂಗಳ ಭದ್ರತೆಗಾಗಿ ಮೋದಿಯನ್ನು ಬೆಂಬಲಿಸಿ ಬಿಜೆಪಿಗೆ ಮತ ನೀಡಿ ಎಂದರು.
ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ ಭಾರತದಲ್ಲಿ ಹಲವು ಧರ್ಮಗಳಿವೆ, ಆದರೆ ಎಲ್ಲ ಧರ್ಮಗಳಿಗಿಂತ ಶ್ರೇಷ್ಠವಾದ್ದು ರಾಷ್ಟ್ರಧರ್ಮ, ಆ ರಾಷ್ಟ್ರಧರ್ಮವನ್ನು ಅನುಸರಿಸಲು ಸಂವಿಧಾನವೆಂಬ ಮಂತ್ರವಿದೆ, ಆ ಮಂತ್ರದ ಆಶಯದಂತೆ ಪ್ರತಿ 5 ವರ್ಷಕ್ಕೊಮ್ಮೆ ಭಾರತ ಮಾತೆಯ ಸೇವೆಗೆ ಪ್ರಧಾನ ಸೇವಕನನ್ನು ಆಯ್ಕೆ ಮಾಡುವ ಜವಾಬ್ದಾರಿ ಪ್ರತಿ ಭಾರತೀಯನಿಗಿದೆ, ನನ್ನ ದೇಶ, ನನ್ನ ಮತ ಎಂಬ ಬದ್ದತೆಯಿಂದ ರಾಷ್ಟ್ರಧರ್ಮ ಬಲಗೊಳ್ಳಲು ಪ್ರತಿಯೋಬ್ಬರು ಬಿಜೆಪಿಗೆ ಮತ ನೀಡಿ ಪ್ರಧಾನ ಸೇವಕ ಮೋದಿಯವರ ಕೈ ಬಲಪಡಿಸಿ ಎಂದರು.
ಪಾದಯಾತ್ರೆಯಲ್ಲಿ ಬಸವರಾಜ ಯಂಕಂಚಿ, ಸಿ.ಎಸ್.ಪಾಟೀಲ,ಮಹಾಂತೇಶ ಶೆಟ್ಟರ, ರುದ್ರು ಅಕ್ಕಿಮರಡಿ, ನಗರಸಭೆ ಸದಸ್ಯೆ ಭುವನೇಶ್ವರಿ ಕುಪ್ಪಸ್ತ, ಶೋಭಾ ರಾವ್, ಭಾಗ್ಯಶ್ರೀ ಹಂಡಿ, ಯಮುನಾ ಜೋಷಿ, ಭಾರತಿ ಪಾಟೀಲ, ದ್ಯಾಮಣ್ಣ ಜಲಗೇರಿ, ಸುರೇಶ ವಸ್ತ್ರದ. ಸುರೇಂದ್ರ ಜೋಷಿ, ಸಿದ್ದಣ್ಣ ಬೆಣ್ಣೂರ, ಬನಪ್ಪ ಮಡಿವಾಳರ, ಪ್ರಕಾಶ ಹಾಲವಾರ, ಶಿವಾನಂದ ಕುಂಬಾರ, ಲಕ್ಷ್ಮಣ ಹಡಪದ, ಸೇರಿದಂತೆ ನಗರಸಭೆ ಸದಸ್ಯರು, ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.
ವಿದ್ಯಾಗಿರಿಯ 32 ನೇ ವಾರ್ಡಿನಲ್ಲಿ ಬರುವ 3 ರಿಂದ 10 ನೇ ರಸ್ತೆಗಳಲ್ಲಿ ಬರುವ ಮನೆ ಮನೆಗೆ ತೇರಳಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ ಮಾಡಲಾಯಿತು.



> "ಎಲ್ಲ ಧರ್ಮಗಳಿಗಿಂತ ಶ್ರೇಷ್ಠವಾದ್ದು ರಾಷ್ಟ್ರಧರ್ಮ, ನನ್ನ ದೇಶ, ನನ್ನ ಮತ ಎಂಬ ಬದ್ದತೆಯಿಂದ ರಾಷ್ಟ್ರಧರ್ಮ ಬಲಗೊಳ್ಳಲು ಪ್ರತಿಯೋಬ್ಬರು ಬಿಜೆಪಿಗೆ ಮತ ನೀಡಿ ಪ್ರಧಾನ ಸೇವಕ ಮೋದಿಯವರ ಕೈ ಬಲಪಡಿಸಿ.
> –ಡಾ. ವೀರಣ್ಣ ಚರಂತಿಮಠ
> ಮಾಜಿ ಶಾಸಕರು
> ಬಾಗಲಕೋಟೆ.

## ನಗರದಲ್ಲಿ ಗದ್ದಿಗೌಡರಿಂದ ಮತಯಾಚಣೆ



**ಬಾಗಲಕೋಟೆ :** ನಗರದಲ್ಲಿ ಗುರುವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಲೋಕಸಭಾ ಚುನಾವಣೆ ನಿಮಿತ್ಯ ನಗರದಲ್ಲಿ ಹಮ್ಮಿಕೊಂಡ ಪಾದಯಾತ್ರೆಯಲ್ಲಿ ಬಿಜೆಪ ಅಭ್ಯರ್ಥಿ ಪಿಸಿ ಗದ್ದಿಗೌಡರ ಹಾಗೂ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಭಾಗವಹಿಸಿ ಮನೆ ಮನೆಗೆ ತೆರಳಿ ಬಿಜೆಪಿಗೆ ಮತ ನೀಡುವಂತೆ ಮನವಿ ಮಾಡಿದರು.
ಪಾದಯಾತ್ರೆ ಬಾಗಲಕೋಟೆ ನಗರದ 17 ನೇ ವಾರ್ಡಿನಲ್ಲಿ ದುರ್ಗಾ ವಿಹಾರದಿಂದ ಪ್ರಾರಂಭವಾದ ಪಾದಯಾತ್ರೆ ಶಾಂತಿನಗರ, ದಂಡಿನ ಆಸ್ಪತ್ರೆ ರಸ್ತೆ, ಹಳೆ ಪ್ರವಾಸಿ ಮಂದಿರ ರಸ್ತೆ ಮೂಲಕ ಮನೆ ಮನೆ ಬೇಟಿ ನೀಡಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ ಮಾಡಲಾಯಿತು.
ಪಾದಯಾತ್ರೆಯಲ್ಲಿ ಡಾ. ಎಂ.ಎಸ್. ದಡ್ಡೆನ್ನವರ, ಅಪ್ಪು ಅಂಟೀನ, ಸಿ.ವ್ಹಿ.ಕೋಟಿ, ಬಸವರಾಜ ಯಂಕಂಚಿ, ಯಲ್ಲಪ್ಪ ಬೆಂಡಿಗೇರಿ,ಸಲಿಂ ಮೋಮಿನ್, ನಗರಸಭೆ ಸದಸ್ಯ ಶ್ರೀಹರಿ ಟಿಕಾರಿ, ಸರಸ್ವತಿ ಕುರಬರ, ಶಶಿಕಲಾ ಮಜ್ಜಗಿ, ಸಂಗಮ ಸರ್,ಯಚ್ಚರಪ್ಪ ಬಡಿಗೇರ, ಮಹಾಂತೇಶ ಹಿರೇಮಠ, ವೀರಣ್ಣ ಹದ್ಲಿ, ಸಮತೋಷ ಜಕಾತಿ, ರವಿ ಶಿರೋಡಕರ. ದತ್ತು ಶಹಾಪುರ, ಬಿ.ಆರ್.ಮುಕುಪಿ, ನೀರಂಜನ ಯಡಹಳ್ಳಿ, ಶ್ರೀಯೆಸ್ಸ ಗೌಡರ, ಬಸವರಾಜ ಹುನಗುಂದ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.

ಬಾದಾಮಿ ತಾಲೂಕ ಘಟಕದ ಕೋಶಾಧ್ಯಕ್ಷ ಪವಾಡಶೆಟ್ಟರಿಗೆ ಕಸಾಪ ಶ್ರದ್ಧಾಂಜಲಿ

## ಶಿಕ್ಷಣ ಹಾಗೂ ಸಂಘಟನೆಗೆ ಪವಾಡಶೆಟ್ಟರ ಸೇವೆ ಅನನ್ಯ: ಡಾ.ಪ್ರಕಾಶ ಖಾಡೆ



**ಬಾಗಲಕೋಟೆ :** ಬಾಗಲಕೋಟೆ ಜಿಲ್ಲೆಯ ಶಿಕ್ಷಣ ರಂಗಕ್ಕೆ ಹಾಗೂ ಸಂಘಟನೆಗೆ ದಿವಂಗತ ಬಿ.ಎಸ್.ಪವಾಡಶೆಟ್ಟಿ ಅವರ ಸೇವೆ ಅನನ್ಯವಾಗಿದೆ ಎಂದು ಸಾಹಿತಿ ಡಾ.ಪ್ರಕಾಶ ಖಾಡೆ ಅವರು ಹೇಳಿದರು. ಅವರು ನವನಗರದ ಜಿಲ್ಲಾ ಕಸಾಪ ಸಭಾಭವನದಲ್ಲಿ ನಡೆದ ಕಸಾಪ ಬಾದಾಮಿ ತಾಲೂಕ ಘಟಕದ ಕೋಶಾಧ್ಯಕ್ಷರಾಗಿದ್ದ ಬಿ.ಎಸ್. ಪವಾಡಶೆಟ್ಟಿ ಅವರಿಗೆ ಶೃದ್ಧಾಂಜಲಿ ಸಲ್ಲಿಸಿ ಮಾತನಾಡಿದರು.

ಬಾಗಲಕೋಟೆ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಬಾದಾಮಿ ತಾಲೂಕಿನ ಕಸಾಪ ಗೌರವ ಕೋಶಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಬಿ.ಎಸ್.ಪವಾಡಶೆಟ್ಟರ ಅವರು ನಿನ್ನೆ ದಿ.24-4-2024 ರಂದು ಸಾಯಂಕಾಲ 6 ಗಂಟೆಗೆ ನಿಧನದ ಸುದ್ಧಿ ಜಿಲ್ಲೆಯ ಸಾಹಿತಿಗಳಿಗೆ ಶಿಕ್ಷಣ ಪ್ರೇಮಿಗಳಿಗೆ ನೋವು ಉಂಟು ಮಾಡಿದೆ. ಅವರ ನಿಧನದಿಂದ ಜಿಲ್ಲೆಯ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕಕ್ಕೆ ನಷ್ಟವುಂಟಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ ಅವರು ಮಾತನಾಡಿ ಹಿರಿಯರಾದ ಬಿ.ಎಸ್.ಪವಾಡಶೆಟ್ಟಿ ಅವರು ಅಗಲಿಕೆಯಿಂದ ಜಿಲ್ಲೆಯ ಸಾಹಿತ್ಯ ಪರಿಷತ್ತಿಗೆ ನೋವುಂಟಾಗಿದೆ. ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ. ಅವರು ಕಸಾಪ ಬಾದಾಮಿ ತಾಲೂಕ ಘಟಕದ ಕೋಶಾಧ್ಯಕ್ಷರಾಗಿ ಸಲ್ಲಿಸಿರುವ ಸೇವೆ ಸದಾ ಸರಣಿಯವಾಗಿದೆ ಎಂದರು.

ಹಿರಿಯ ಸಾಹಿತಿ ಡಾ.ಮೈನುದ್ಧಿನ ರೇವಡಿಗಾರ ಅವರು ಮಾತನಾಡಿ ಬಾದಾಮಿಯಲ್ಲಿ ಜರುಗಿದ ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲಿ ಅವರ ಕ್ರಿಯಾಶೀಲತೆ ಎದ್ದು ತೋರುತ್ತಿತ್ತು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ. ಚಂದ್ರಶೇಖರ ಕಾಳನ್ನವರ, ತಾಲೂಕು ಅಧ್ಯಕ್ಷರಾದ ಪಾಂಡುರಂಗ ಸಣ್ಣಪ್ಪನವರ ಮತ್ತು ಪ್ರೊ.ಸಂಗಮೇಶ ಬ್ಯಾಳಿ ಶೃದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡಿದ್ದರು.

## ಮಹಿಳೆಯರ ಉಜ್ವಲ್ ಭವಿಷ್ಯ ಹಾಗೂ ಭದ್ರತೆ ಪ್ರಧಾನಿ ಮೋದಿಯಿಂದ ಸಾಧ್ಯ: ಗದ್ದಿಗೌಡರ

**ಬಾಗಲಕೋಟೆ :** ದೇಶದಲ್ಲಿ ಮಹಿಳೆಯರ ಉಜ್ವಲ್ ಭವಿಷ್ಯ ಹಾಗೂ ಭದ್ರತೆ ಪ್ರಧಾನಿ ನರೇಂದ್ರ ಮೋದಿಯಿಂದ ಸಾಧ್ಯ ಎಂದು ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಗರದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ನವನಗರದ 28 ನೇ ವಾರ್ಡಿನ 8 ನೇ ಸೇಕ್ಟರ್‌ನಲ್ಲಿರುವ ನಗರಸಭೆ ಸದಸ್ಯೆ ಪ್ರಕಾಶ ಹಂಡಿ ಅವರ ಮನೆ ಆವರಣದಲ್ಲಿ ಹಮ್ಮಿಕೊಂಡ ಚುನಾವಣಾ ಪ್ರಚಾರದ ವಾರ್ಡ ಸಭೆಯನ್ನುದ್ದೇಶಿಸಿ ಮಾತನಾಡಿದರು.

ರಾಜಕೀಯ ಕ್ಷೇತ್ರದಲ್ಲಿ ಮಹಿಳಿಯರಿಗೆ ಸಮಾನ ಅವಕಾಶ ಕಲ್ಪಿಸಲು ಲೋಕಸಭೆ ಮತ್ತು ರಾಜ್ಯಸಭೆಯಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿಗಾಗಿ ನಾರಿ ಶಕ್ತಿ ವಂದನಾ ಅಧಿನಿಯಮ ತರೂವ ಮೂಲಕ ಅವರ ಉಜ್ವಲ ಭವಿಷ್ಯ



ಹಾಗೂ ಭದ್ರತೆಗೆ ಪ್ರಧಾನಿ ಮೋದಿ ಕಾರಣರಾಗಿದ್ದಾರೆ, ಅಲ್ಲದೆ ಬೇಟಿ ಬಚಾವೋ, ಬೇಟಿ ಪಡಾವೋ ಅಭಿಯಾನದಡಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ,ರಕ್ಷಣೆ ಮತ್ತು ಉತ್ತಮ ಭವಿಷ್ಯಕ್ಕಾಗಿ ಅವರ ಹೆಸರಿನಲ್ಲಿ ಠೇವಣಿ ಇಡುವ ಪ್ರಧಾನಮಂತ್ರಿ ಸುಕನ್ಯಾ ಸಮೃದ್ಧಿ ಯೋಜನೆ ತಂದಿದ್ದಾರೆ, ಮುಸ್ಲಿಂ ಹೆಣ್ಣು ಮಕ್ಕಳ ವ್ಯಯುಕ್ತಿಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಅವರ ಗೌರವಯುತ ಬದುಕಿಗಾಗಿ ತ್ರವಳಿ ತಲಾಖ ನಿಷೇಧ, ಪ್ರತಿ ತಿಂಗಳ 9 ರಂದು ಎಲ್ಲಾ ಗರ್ಭಿಣಿಯರಿಗೆ ಪ್ರಧಾನ ಮಂತ್ರಿ ಸುರಕ್ಷಿತ್ ಮಾತೃತ್ವ ಅಭಿಯಾನದಡಿ ಸಾರ್ವತ್ರಿಕವಾಗಿ ಸಮಗ್ರ ಮತ್ತು ಗುಣಮಟ್ಟದ ಪ್ರಸವ ಪೂರ್ವ ಆರೋಗ್ಯ ತಪಾಸಣೆ, ಅಗಸ್ಟ್ 2023 ರವರೆಗೆ 17.41.249 ಗರ್ಭಿಣಿಯರಿಗೆ ಪ್ರಸವಪೂವ ಆರೈಕೆ, ವೇತನ ಸಹಿತ ಹೇರಿಗೆ ರಜೆಯನ್ನು 12 ವಾರದಂದ 26ವಾರಕ್ಕೆ ಹೇಚ್ಚಳ ಮಾಡಲಾಗಿದೆ, ಪ್ರಧಾನ ಮಂತ್ರಿ ಉಜ್ವಲ ಯೋಜನೆಯಲ್ಲಿ ಹೊಗೆ ಮುಕ್ತ ಮನೆ-ಆರೋಗ್ಯ ಯುಕ್ತ ಜೀವನಕ್ಕಾಗಿ 9.6 ಕೋಟಿ ಮನೆಗಳಿಗೆ ಉಚಿತ ಎಲ್.ಪಿ.ಜಿ ಸಂಪರ್ಕ ಕಲ್ಪಿಸಿದೆ, ಮಹಿಳೆಯರಿಗೆ ಸಾಕಷ್ಟು ಯೋಜನೆಗಳನ್ನು ತಂದು ಅವರ ಬದುಕಿಗೆ ಕೇಂದ್ರ ಬಿಜೆಪಿ ಸರಕಾರ ಆಸರೆಯಾಗಿದೆ,

ದೇಶದಲ್ಲಿ ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಬಿಜೆಪಿಗೆ ಮತ ನೀಡುವವಂತೆ ಮನವಿ ಮಾಡಿದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ ದೇಶದಲ್ಲಿ ಹೊಸ 7 ಐಐಎಮ್, 7 ಐಐಟಿಗಳ ಸ್ಥಾಪನೆ, ಎಮ್ಸ್ ಗಳ ಸಂಖ್ಯೆಯಲ್ಲಿ ಮೂರು ಪಟ್ಟು ಹೆಚ್ಚಳ, ಹಾಗೂ ವಸಾಹತು ಶಾಹಿ ಮಾನಸಿಕತೆಗೆ ಅಂತ್ಯ ಹಾಡಲು, ಪ್ರಾದೇಶಿಕತೆಗೆ ಒತ್ತು ನೀಡಲು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡಿದ್ದು ಅದರಿಂದ ನಮ್ಮ ಶಿಕ್ಷಣ ರಂಗದಲ್ಲಿ ಹೊಸ ಬೆಳಕು ಕಾಣಲಿದ್ದು ರಾಜ್ಯದಲ್ಲಿಯೂ ಕೂಡಾ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಬೇಕಿದೆ ಎಂದ ಅವರು ದೇಶ ಉಳಿಯಲು ಬಿಜೆಪಿಗೆ ಮತ ನೀಡುವುದು ಅವಶ್ಯ ಎಂದು ಜನರಿಗೆ ತಿಳಿಸಿ ಮತಯಾಚನೆ ಮಾಡಿದರು.

ಸಭೆಯಲ್ಲಿ ಪ್ರಕಾಶ ದಾಯಪುಲೆ, ಮೇಲಪ್ಪ ಬಾದೋಡಗಿ, ಚಂಬಣ್ಣ ಹಂಡಿ, ಬ್ಯಾಗ್ಯಶ್ರೀ ಹಂಡಿ, ರೇಖಾ ಉಂಕಿ,ಅಂಬರೀಷ ಕೊಳ್ಳಿ, ಮಲ್ಲಪ್ಪ ಮಮದಾಪುರ, ಅರವಿಂದ ಕಟ್ಟಿಮನಿ, ಮಂಜು ಪತ್ತಾರ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

## ಮೆಹಂದಿ ಮೂಲಕ ಮತದಾನ ಜಾಗೃತಿ




**ಹುಕ್ಕೇರಿ :** ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ, ಎಪ್ ವಿ ಟಿ ಆರ್ ಎಸ್ ಸಂಸ್ಥೆ, ಬೆಂಗಳೂರು ಹಾಗೂ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರ ಯಲ್ಲಾಪೂರ-ಕರಗುಪ್ಪಿ ಇವರ ಸಹಯೋಗದಲ್ಲಿ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದಲ್ಲಿ ಮೆಹಂದಿ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗಲಾ ಮಾತನಾಡಿ ಕಡ್ಡಾಯವಾಗಿ ಮತದಾನ ಮಾಡುವುದು ಅವಶ್ಯಕವಾಗಿದೆ ದೇಶದಲ್ಲಿ ಉತ್ತಮ ಆಡಳಿತವನ್ನು ಪಡೆಯಬೇಕಾದರೆ ಪ್ರತಿಯೊಬ್ಬರು ಮತದಾನ ಮಾಡಬೇಕು. ನಾನ ಒಬ್ಬ ಮತದಾನ ಮಾಡದಿದ್ದರೆ ಏನಾಗುತ್ತೆ ಅನ್ನೋ ಮನೋಭಾವ ಬಿಟ್ಟು ನಮ್ಮ ಒಂದು ಮತದಾನದಿಂದ ದೇಶದ ಭವಿಷ್ಯ ನಿರ್ಧಾರವಾಗುತ್ತದೆ ಆದ್ದರಿಂದ ಪ್ರತಿಯೊಬ್ಬರು ಮತದಾನ ಮಾಡಿ ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಎಪ್ ವಿ ಟಿ ಆರ್ ಎಸ್ ಸಂಸ್ಥೆಯ ಕ್ಷೇತ್ರ ಸಂಯೋಜಕ ಬಸವರಾಜ ಮಣ್ಣಿಕೇರಿ ಉಪಸ್ಥಿತರಿದ್ದರು 35 ಕ್ಕೂ ಹೆಚ್ಚಿನ ಮಹಿಳೆಯರು ಮೆಹಂದಿ ಮೂಲಕ ಜಾಗೃತಿ ಮೂಡಿಸಿದರು.

## ಉತ್ತಿಷ್ಠ ಭಾರತ ಬಿಜೆಪಿ ಸಂಕಲ್ಪ: ಗದ್ದಿಗೌಡರ

**ಬಾಗಲಕೋಟೆ :** ಬಡಜನರ ಆರ್ಥಿಕತೆಯ ಸುಧಾರಣೆ ಮೂಲಕ ಎಲ್ಲ ಜನರನ್ನು ಶ್ರಿಮಂತಗೊಳಿಸಿ ಎಲ್ಲ ರಂಗದಲ್ಲೂ ಅಭಿವೃದ್ಧಿ ಸಾಧಿಸಿ ದೇಶವನ್ನು ಉತ್ತಿಷ್ಠ ಭಾರತ ಮಾಡುವ ಗುರಿ ಬಿಜೆಪಿ ಸಂಕಲ್ಪವಾಗಿದೆ ಎಂದು ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ಲೋಕಸಭೆ ಚುನಾವಣಾ ನಿಮತ್ಯ ಗುರುವಾರ ಸಂಜೆ ನೀರಲಕೇರಿ ಹಾಗೂ ನೀಲಾನಗರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ವಿವಿಧ ಕ್ಷೇತ್ರಗಳಲ್ಲಿ ವಿಶ್ವದಲ್ಲಿಯೆ ಭಾರತ ಹೋಸ ಹೆಜ್ಜೆ ಇಟ್ಟಿದ್ದು ಮೋಬೈಲ್ ಉತ್ಪಾದನೆಯಲ್ಲಿ, ಸಕ್ಕರೆ ಉತ್ಪಾದನೆ ಜೋತಗೆ ಗ್ರೀನ್ ಎನರ್ಜಿ ಬಳಕೆಯಲ್ಲಿ ಮೋದಲೆ ಸ್ಥಾನದಲ್ಲಿದ್ದೆವೆ, ಹಣ್ಣು ತರಕಾರಿ ಉತ್ಪಾದನೆ, ಮಿನುಗಾರಿಗೆ, ಸ್ಟೀಲ್ ಉತ್ಪಾದನೆಯಲ್ಲೆ 2ನೇ ಸ್ಥಾನದಲ್ಲಿದ್ದೆವೆ, ವಿದ್ಯುಚ್ಛಕ್ತಿ ಉತ್ಪಾದನೆ, ನವೀಕರಿಸಬಹುದಾದ ಇಂಧನ ಉತ್ಪಾಧನೆಯಲ್ಲಿ 3 ನೇ ಸ್ಥಾನದಲ್ಲಿದ್ದೆವೆ,



ಆಟೋಮೈಬೈಲ್ ಮಾರುಕಟ್ಟೆ 4 ನೇಸ್ಥಾನದಲ್ಲಿದ್ದೆವೆ, ಇಂದು ಭಾರತದ ಈ ಬೇಳವಣಿಗೆಗೆ ಜಗತ್ತೆ ಬೇರಗುಗೊಂಡಿದೆ, ಇಂದು ಭಾರತ ಉತ್ತಿಷ್ಠ ಭಾರತವಾಗಿ ಬೇಳೆಯುತ್ತಿದೆ, ಸಮಾಜಮುಖಿ ಚಿಂತನೆ,ಸಮರ್ಪಕ ಯೋಜನೆ, ಸಮರ್ಥ ನಾತಕತ್ವ, ದಿಟ್ಟ ನಿರ್ಧಾರ, ಧಾರ್ಮಿಕತೆಯ ಪುನರುತ್ಥಾನ, ರೈತ, ಶಿಕ್ಷಣ,ಆರ್ಥಿಕತೆಯಲ್ಲಿ ಸದೃಡತೆ, ಮಹಿಳಾ ಕಲ್ಯಾಣ,ಕೌಶಲ್ಯಾಭಿವೃದ್ಧಿ ಯೋಜನೆ, ಮೂಲಭೂತ ಸೌಕರ್ಯ, ಸ್ಪಂದನೆ,ಸ್ವಾವಲಂಭನೆ ಮೂಲಕ ಭಾರತ ಪ್ರಗತಿಯತ್ತ ಸಾಗುತ್ತಿದೆ,

ಬಿಜೆಪಿ ಬಹುಮುಖ್ಯ ಗುರಿ ಭಾರತ ವಿಶ್ವಗುರುವಾಗಬೇಕೆಂದು ಅದನ್ನು ನನಸಾಗಿಸಲೂ ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿಯಾಗಬೇಕಾಗಿದೆ, ದೇಶದ ಹಿತಕ್ಕಾಗಿ ಬಿಜೆಪಿ ಮತ ನೀಡಿ ಆಶೀರ್ವದಿಸಿ ಎಂದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ ಈ ಕಾಂಗ್ರೆಸ್ ಗ್ಯಾರಂಟಿಗಳ ನಿಜ ಬಣ್ಣ ಜನರ ಮುಂದೆ ಬಯಲಾಗಿದೆ, ಜನತೆಗೆ ತಮಗಿಂತ ದೇಶ ಮುಖ್ಯವಾಗಿದೆ, ಮೋಧಿ ಗ್ಯಾರಂಟಿ ಮುಂದೆ ಕಾಂಗ್ರೆಸ್ಸ ಗ್ಯಾರಂಟಿಗಳ ಆಟ ನಡೆಯುವುದಿಲ್ಲಾ, ವಿಧಾನಸಭಾ ಚುನಾವಣೆಯಲ್ಲಿ ಲಂಬಾಣಿ ಸೇರಿದಂತೆ ಅನೇಕ ಸಮುದಾಯಗಳಿಗೆ ಅವರ ಮೀಸಲಾತಿ ತಗೆಯಲಾಗಿದೆ ಎಂದು ತಪ್ಪು ಸಂದೇಶ ಹರಡಿದ್ದರು, ಆದರೆ ಯಾವ ಸಮುದಾಯಗಳ ಮಿಸಲಾತಿಯನ್ನು ತಗೆದಿಲ್ಲಾ ಮತ್ತು ತಗೆಯಲು ಬರುವುದಿಲ್ಲಾ ಯಾರ ಅಪಪ್ರಚಾರಕ್ಕೆ ಕಿವಿಗೊಡಬೇಡಿ ಎಂದು ತಿಳಿಸಿದ ಅವರು ಈ ಬಾರಿ ಪ್ರಧಾನಿ ಮೋದಿಯನ್ನು ಬೆಂಬಲಿಸಿ ಪಿ.ಸಿ.ಗದ್ದಿಗೌಡರಿಗೆ ಮತ ನೀಡುವಂತೆ ಮನವಿ ಮಾಡಿದರು.

ಸಭೆಯಲ್ಲಿ ನಾಗೇಶ ಪುಜಾರಿ, ರಂಗನಗೌಡ ಗೌಡರ, ರಮೇಶ ಕುರಿಗಾರ, ಬದ್ದಪ್ಪ ಲಕುಮಪ್ಪ ಪುಜಾರಿ, ರಾಮು ಕಟ್ಟಿಮನಿ,ಸಿ.ವ್ಹಿ.ಕೋಟಿ, ಸಂಗಣ್ಣ ಕಲಾದಗಿ, ಪ್ರಭುಸ್ವಾಮಿ ಸರಗಣಾಚಾರಿ, ಸುರೇಶ ಕೋಣ್ಣೂರ, ವೇಂಕಟೇಶ ಕಟ್ಟಿಮನಿ, ರಮೇಶ ಪಡಸಾಲಿಮನಿ, ಲಚ್ಚಪ್ಪ ಪಡಸಾಲಿಮನಿ,ಗಿರಿಯಪ್ಪ ಪಡಸಾಲಿಮನಿ, ನಾಗೇಶ ಕಟ್ಟಿಮನಿ, ನಾಗೇಶ ಬಡಿಗೇರ, ಸಂತೋಷ ರಂಗಪ್ಪ ಗೌಡರ, ಕಲ್ಲಪ್ಪ ಭಗವತಿ, ಬಸು ಮಲ್ಲಾಪುರ, ಈರಣ್ಣ ಜಂಗವಾಡ, ಯಮನಪ್ಪ ಬಾಳನ್ನವರ, ರಾಮಚಂದ್ರಪ್ಪ ತೂಗುಣಿಸಿ, ರಾಯನಗೌಡ ಗೌಡರ, ಬರಮಣ್ಣ ಸೊನ್ನದ, ರಮೇಶ ದಳವಾಯಿ, ವಿಠ್ಠಲಪ್ಪ ಮಾದರ, ಪಕಿರಪ್ಪ ಮಾದರ ಸೇರಿದಂತೆ ಭಾಗವಹಿಸಿದ್ದರು.

## ಅಮೋಘಸಿದ್ಧೇಶ್ವರ ಮಹಾರಥೋತ್ಸವ ಸಂಭ್ರಮ



**ಮಹಾಲಿಂಗಪುರ :** ಸಮೀಪದ ನಾಗರಾಳ ಗ್ರಾಮದಲ್ಲಿ ಅಮೋಘಸಿದ್ಧೇಶ್ವರ ಜಾತ್ರೆಯ ಎರಡನೇ ದಿನವಾದ ಶುಕ್ರವಾರ ರಾತ್ರಿ ಸಂಭ್ರಮದ ಮಹಾರಥೋತ್ಸವ ನಡೆಯಿತು.

ರಾತ್ರಿ 8.15 ಗಂಟೆಗೆ ಸಾಗಿದ ರಥೋತ್ಸವವು ಲಕ್ಕವ್ವ ದೇವಸ್ಥಾನದಿಂದ ಅಮೋಘಸಿದ್ಧೇಶ್ವರ ದೇವಸ್ಥಾನದವರೆಗೂ ಸಾಗಿತು. ಭಕ್ತರು ಬೆಂಡು, ಬೆತ್ತಾಸುತೂರಿ ಭಕ್ತಿ ಪರಾಕಾಷ್ಠೆ ಮೆರೆದರು. ಜಾತ್ರೆ ಅಂಗವಾಗಿ ಶುಕ್ರವಾರ ಬೆಳಿಗ್ಗೆ ಡೊಳ್ಳಿನ ವಾಲಗ ಓಲಗದೊಂದಿಗೆ ಅಮೋಘಸಿದ್ಧೇಶ್ವರನಿಗೆ ಅಭಿಷೇಕ, ಅನ್ನ ಸಂತರ್ಪಣೆ ನಡೆಯಿತು. ಸಂಜೆ ಗ್ರಾಮದೇವಿಯ ಉಡಿ ತುಂಬುವಕಾರ್ಯಕ್ರಮ ನೆರವೇರಿತು.

ರಥೋತ್ಸವದ ನಂತರ ಅಮೋಘಸಿದ್ಧೇಶ್ವರ ದೇವಸ್ಥಾನದ ಎದುರು ನಾಗರಾಳದ ವೀರಸಾವರಕರ ಯುವಕ ಸಂಘದ ಆಶ್ರಯದಲ್ಲಿ ಮೂಡಲಗಿಯ ಪೃಥ್ವಿ ಮೆಲೋಡಿಸ್ ಆರ್ಕೆಸ್ಟ್ರಾತಂಡದಿಂದ ಹಾಸ್ಯರಸಮಂಜರಿ ಕಾರ್ಯಕ್ರಮ ನಡೆಯಿತು.

## ಮತದಾನ ನಂತರ ವೃದ್ಧೇ ಸಾವು



**ರಬಕವಿ-ಬನಹಟ್ಟಿ :** ಮನೆಯಲ್ಲಿ ಮತದಾನ ಮಾಡಿದ ವೃದ್ಧೆಯೋರ್ವರು ಮೃತಪಟ್ಟ ಘಟನೆ ಬಾಗಲಕೋಟೆ ಜಿಲ್ಲೆ ರಬಕವಿ-ಬನಹಟ್ಟಿ ತಾಲೂಕಿನ ರಬಕವಿಯಲ್ಲಿ ನಡೆದಿದೆ.

ಮೃತ ಕಾಶವ್ವ ಬಾಲಚಂದ್ರಪ್ಪ ಸಣಕಾಲ(85) ವಯೋಸಹಜ ಕಾಯಿಲೆಯಿಂದ ಮನೆಯಲ್ಲಿಯೇ ಇದ್ದರು. ಬರುವ ಲೋಕಸಭಾ ಚುನಾವಣೆಯಲ್ಲಿ ರಬಕವಿಯ ವಾರ್ಡ್ ನಂ.24 ರ ಕನ್ನಡ ಸರ್ಕಾರಿ ಶಾಲೆಯ ಮತಗಟ್ಟೆ ಸಂಖ್ಯೆ 100 ರಲ್ಲಿ ಮತದಾನ ಮಾಡಬೇಕಿತ್ತು. ಆರೋಗ್ಯ ಹದಗೆಟ್ಟಿದ್ದರೂ ಕಾಶವ್ವ ಸಣಕಾಲ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಉತ್ಸುಕರಾಗಿದದ್ದರು. ಈ ಬಾರಿ 85 ವರ್ಷ ಮೇಲ್ಪಟ್ಟವರು ಹಾಗೂ ವಿಶೇಷ ಚೇತನರಿಗೆ ಮನೆಯಲ್ಲಿಯೇ ಮತದಾನ ಮಾಡುವ ವ್ಯವಸ್ಥೆ ಕಲ್ಪಿಸಲಾದ ಕಾರಣ ಚುನಾವಣಾ ಆಯೋಗ ನಿಡಿರುವ ಅರ್ಜಿಯ ಪ್ರಕಾರ ವಿಶೇಷ ಮತಗಟ್ಟೆ ತಂಡ ಸಣಕಾಲ ಮನೆಗೆ ತೆರಳಿ ಮತದಾನ ಮಾಡಿತ್ತು.

ಶುಕ್ರವಾರ ಸಂಜೆ 4 ಗಂಟೆ ವೇಳಗೆ ಮತದಾನ ಮಾಡಿದ ಒಂದೇ ಗಂಟೆಯಲ್ಲಿ ವೃದ್ದೆ ಸಾವನ್ನಪ್ಪಿದ ಘಟನೆ ನಡೆದಿದೆ. ಇವರ ಅಂತ್ಯಕ್ರಿಯೆಯು ಶನಿವಾರ ಬೆಳಿಗ್ಗೆ 11 ಗಂಟೆಗೆ ರಬಕವಿಯ ಹಿಂದೂ ರುದ್ರಭೂಮಿಯಲ್ಲಿ ಜರುಗಿತು. ಮೃತರಿಗೆ ಸಮಾಜ ಸೇವಕ ಪ್ರಕಾಶ ಸಣಕಾಲ ಪುತ್ರರಾಗಿದ್ದಾರೆ.

## ಡಾ. ನಾಡಗೌಡ ಮರಳಿ ಕಾಂಗ್ರೆಸ್ ಸೇರ್ಪಡೆ

### ತೇರದಾಳ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಮತ್ತಷ್ಟು ಬಲ



**ರಬಕವಿ-ಬನಹಟ್ಟಿ :** ಕಳೆದ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ರಬಕವಿಯ ಡಾ. ಪದ್ಮಜೀತ ನಾಡಗೌಡ ಪಾಟೀಲ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರ ಪರಿಣಾಮ ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆಗೊಂಡಿದ್ದರು.

ಇದೀಗ ಲೋಕಸಭಾ ಚುನಾವಣೆ ಹಿನ್ನಲೆ ಬಾಗಲಕೋಟೆ ಲೋಕಸಭಾ ಅಭ್ಯರ್ಥಿ ಸಂಯುಕ್ತಾ ಪಾಟೀಲ ಪರ ಬೆಂಬಲಕ್ಕೆ ನಿಂತು ಇಂದು ಶನಿವಾರ ಮುಖ್ಯಮಂತ್ರಿ ಸಿದ್ರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಇವರ ಜೊತೆಗೆ ಡಾ. ಪದ್ಮಜೀತ ನಾಡಗೌಡ ಪಾಟೀಲರ ಬೆಂಬಲಿಗರಾದ ಶಂಕರ ಸೊರಗಾಂವಿ, ಮಾಳು ಹಿಪ್ಪರಗಿ, ಜಿನ್ನಪ್ಪ ಹೊಸೂರ, ಶ್ರೀಖರ ಪಿಸೆ, ಪ್ರಕಾಶ ನಡೋನಿ, ಸದಾಶಿವ ನಾಯಕ, ಸಂಜಯ ಅಮ್ಮಣಗಿಮಠ, ರಾಜು ದೇಸಾಯಿ, ರವೀಂದ್ರ ಬಾಡಗಿ ಸೇರಿದಂತೆ ಮಹಾಲಿಂಗಪೂರ-ತೇರದಾಳ-ರಬಕವಿ-ಬನಹಟ್ಟಿ ಪಟ್ಟಣ ಹಾಗು ಕ್ಷೇತ್ರದಲ್ಲಿನ ಎಲ್ಲ ಗ್ರಾಮಗಳ ನೂರಾರು ಮುಖಂಡರು, ಕಾರ್ಯಕರ್ತರು, ಸಾಮೂಹಿಕವಾಗಿ ಸೇರ್ಪಡೆಗೊಳ್ಳುವಲ್ಲಿ ಕಾರಣವಾಯಿತು.

## ಸೈದಾಪುರದಲ್ಲಿ ಐದೇಶಿ ಮತ್ತು ಹನುಮಾನ ಓಕುಳಿ



**ಮಹಾಲಿಂಗಪುರ :** ಸಮೀಪದ ಸೈದಾಪುರ ಗ್ರಾಮದಲ್ಲಿ ಶಿವಲಿಂಗೇಶ್ವರ ಜಾತ್ರೆ ಅಂಗವಾಗಿ ಮಾರುತಿ ದೇವರಕೊಂಡ ಪೂಜೆ ಹಾಗೂ ಕಂಬಿ ಐದೇಶಿ ಉತ್ಸವ ಸಂಭ್ರಮದಿಂದ ನೆರವೇರಿತು.

ಕಳೆದ ಭಾನುವಾರ ಸುಕ್ಷೇತ್ರ ಶ್ರೀಶೈಲದಿಂದ ಆಗಮಿಸಿದ ಮಲ್ಲಿಕಾರ್ಜುನ ಕಂಬಿಯನ್ನು ಅಪಾರ ಸಂಖ್ಯೆಯ ಭಕ್ತರು ಸೇರಿ ಬರಮಾಡಿಕೊಂಡಿದ್ದರು. ವಾಡಿಕೆಯಂತೆ ಅದಾಜ ಐದನೇ ದಿನಕ್ಕೆ ಐದೇಶಿ ಉತ್ಸವ ನಡೆಸಲಾಯಿತು.ಶಿವಲಿಂಗೇಶ್ವರ ದೇವಸ್ಥಾನದಲ್ಲಿದ್ದ ಕಂಬಿಗೆ ಭಕ್ತರು ಬೆಲ್ಲದ ನೈವೇದ್ಯ ಹಂಚಿ ಭಕ್ತಿ ಪರಾಕಾಷ್ಠೆ ಮೆರೆದರು.

ಶಿವಲಿಂಗೇಶ್ವರ ಜಾತ್ರೆ ಅಂಗವಾಗಿ ಶನಿವಾರ ಕಡೆಓಕುಳಿ ಕಾರ್ಯಕ್ರಮ ನಡೆಯಿತು. ಕಡೆ ಓಕುಳಿ ನಿಮಿತ್ಯ ಹನುಮಾನ ಮಂದಿರದಲ್ಲಿ ವಿಶೇಷ ಅಲಂಕಾರದೊಂದಿಗೆ ಪೂಜೆ ಸಲ್ಲಿಸಲಾಯಿತು. ಮುಂಜಾನೆಯಿಂದ ಸಂಜೆವರೆಗೆ ಭಕ್ತರು ಹನುಮಾನ ಮಂದಿರಕ್ಕೆ ಭೇಟಿ ನೀಡಿ, ವಿವಿಧ ಸಿಹಿಖಾದ್ಯಗಳ ನೈವೈದ್ಯ ಅರ್ಪಿಸಿ ಕೃತಾರ್ಥರಾದರು.

## ರಾಜನ ಆಗಮನದಿಂದ ಬೀದಿ ವ್ಯಾಪಾರಿಗಳ ಪರದಾಟ

**ರಬಕವಿ-ಬನಹಟ್ಟಿ :** ಇಂದು ಬನಹಟ್ಟಿಯ ಎಸ್‌ಆರ್‌ಎ ಮೈದಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲರ ಪರ ಪ್ರಚಾರಕ್ಕೆಂದು ಮುಖ್ಯಮಂತ್ರಿ ಸಿದ್ರಾಮಯ್ಯ ಆಗಮಿಸುವ ಸಂದರ್ಭ ಬೆಳಿಗ್ಗಿನಿಂದಲೇ ರಬಕವಿಯ ಹಲವಾರು ಬೀದಿ ಬದಿ ಹಾಗು ಬಾಡಿಗೆಯಲ್ಲಿರುವ ಹೊಟೇಲ್, ಪಾನಬೀಡಾ ಸೇರಿದಂತೆ ಇತರೆ ಅಂಗಡಿಗಳನ್ನು ಬಂದ್ ಮಾಡಿಸಿರುವದರಿಂದ ಸಣ್ಣ ವ್ಯಾಪಾರಸ್ಥರು ಆಕ್ರೋಶ ವ್ಯಕ್ತಪಡಿಸುವಲ್ಲಿ ಕಾರಣವಾಯಿತು.

ರಬಕವಿಯ ಎಂ.ವಿ. ಪಟ್ಟಣ ಶಾಲಾ ಮೈದಾನದಲ್ಲಿನ ಹೆಲಿಪ್ಯಾಡ್‌ದಿಂದ ರಸ್ತೆ ಮಾರ್ಗವಾಗಿ ಸಿಎಂ ಸಿದ್ರಾಮಯ್ಯ




ಆಗಮಿಸುತ್ತಿರುವ ಹಿನ್ನಲೆ ಭದ್ರತೆ ದೃಷ್ಟಿಯಿಂದ ಅಂಗಡಿ-ಮುಗ್ಗಟ್ಟುಗಳನ್ನು ಬಂದ್ ಮಾಡಿಸಲಾಯಿತೆಂದು ಅಧಿಕಾರಿಗಳ ಹೇಳಿಕೆಯಾದರೆ, ಮುಂಚಿತವಾಗಿ ತಿಳಿಸಿದ್ದಲ್ಲಿ ಅಡುಗೆ ಸಂಬಂಧ ಯಾವದೇ ತಯಾರಿ ಮಾಡಿಕೊಳ್ಳದೆ ರಜೆ ಮಾಡುತ್ತಿದ್ದೇವು. ಇದೀಗ ಹಾನಿಗೊಂಡು ಆರ್ಥಿಕ ನಷ್ಟ ಭರಿಸುವವರ್‍ಯಾರು? ಎಂಬುದು ಬೀದಿ ಬದಿ ವ್ಯಾಪಾರಿಗಳದ್ದು.

> “‘ಪೊಲೀಸ್ ಅಧಿಕಾರಿಗಳು ಮುಂಚಿತವಾಗಿಯೇ ತಿಳಿಸಿದ್ದಲ್ಲಿ ರಜೆ ಮಾಡುತ್ತಿದ್ದೇವು. ಇದೀಗ ಮಾಡಿದ ಅಡುಗೆ ಎಲ್ಲವೂ ಉಳಿದಿದೆ. ಇದರ ನಷ್ಟ ಅನುಭಿಸುವದೇ ಸವಾಲು’.
> ◆ ಚನ್ನಪ್ಪ ಲಾತೂರ
> ಹೊಟೇಲ್ ವ್ಯಾಪಾರಿ

ಒಟ್ಟಾರೆ ರಾಜನ ಆಗಮನಕ್ಕೆ ಬೀದಿ ವ್ಯಾಪಾರಿಗಳು ಬೇಸರಗೊಳ್ಳುವ ಮೂಲಕ ಹೊಟ್ಟೆ ಪಾಡಿಗಾಗಿ ದುಡಿಯುವ ನಮ್ಮಂಥ ಕುಟುಂಬಗಳ ಗತಿಯೇನು? ಎಂದು ಸಂಕಟ ವ್ಯಕ್ತಪಡಿಸಿದರು.

### ಮತದಾನ ಜಾಗೃತಿ ಅಭಿಯಾನ

## ಮಹಿಳಾ ಸ್ವಸಹಾಯ ಸಂಘಗಳು ಹೆಚ್ಚಿನ ಮತದಾನಕ್ಕೆ ಸಹಕರಿಸಲಿ: ನಾಮದೇವ ಲಮಾಣಿ



**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಪಂಚಾಯತ್ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮುಧೋಳ ಹಾಗೂ ಪಟ್ಟಣ ಪಂಚಾಯತ ಕಾರ್ಯಾಲಯ ಆಶ್ರಯದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರ ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮ ಜರಗಿತು.

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪಪಂ ಮುಖ್ಯಾಧಿಕಾರಿ ನಾಮದೇವ ಲಮಾಣಿ ಮಾತನಾಡಿ ಮಹಿಳಾ ಸ್ವಸಹಾಯ ಸಂಘಗಳು ರನ್ನಬೆಳಗಲಿ ಪಟ್ಟಣದಲ್ಲಿ ಶೇ.100ರಷ್ಟು ಮತದಾನವಾಗಲು ಕೈಜೋಡಿಸಬೇಕು. ನೀವು ಮತದಾನ ಮಾಡುವದರೊಂದಿಗೆ ನಿಮ್ಮ ಅಕ್ಕಪಕ್ಕದವರಿಗೂ ತಿಳಿಸಿ, ಪ್ರಜಾಪ್ರಭುತ್ವದ ಶಕ್ತಿಯೇ ಮತದಾನ ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡುವಂತೆ ಅರಿವನ್ನು ಮೂಡಿಸಬೇಕು. ಪ್ರತಿಯೊಂದು ಮತವು ಭಾರತೀಯ ನಾಗರಿಕನ ಅಮೂಲ್ಯ ಆಸ್ತಿ. ಅಮೂಲ್ಯವಾದ ಆಸ್ತಿಯನ್ನು ಮಾರಿಕೊಳ್ಳದೆ, ಸ್ವಾಭಿಮಾನದಿಂದ ಮತವನ್ನು ಹಾಕಿ ದೇಶದ ಭದ್ರತೆಗೆ ಕೈಜೋಡಿಸಬೇಕು. ಆದರಿಂದ ರನ್ನ ಬೆಳಗಲಿಯಲ್ಲಿ ನೂರಕ್ಕೆ ನೂರರಷ್ಟು ಮತದಾನ ಆಗುವಂತೆ ನಾವೆಲ್ಲರೂ ಮತದಾರ ಬಾಂಧವರಲ್ಲಿ ಜಾಗೃತಿ ಮೂಡಿಸಿ ಚುನಾವಣೆಯ ಹಬ್ಬವನ್ನು ಆಚರಿಸೋಣ ಎಂದರು.

ಪಪಂ ಅಧಿಕಾರಿಗಳಾದ ಪಿ.ಡಿ. ನಾಗನೂರು, ಎಸ್. ಬಿ.ಚೌದ್ರಿ, ಎಸ್.ಜಿ.ಅಳ್ಳಿಮಟ್ಟಿ, ಸಚಿನ ಕಾಸರ, ರಾಜು ಮುಗಳಖೋಡ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು, ಪಪಂನ ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಇದ್ದರು.

# ಗ್ಯಾರಂಟಿ ಹಣದಿಂದ "ರಥ" ನಿರ್ಮಿಸಲು ಮುಂದಾದ ಗೃಹಲಕ್ಷ್ಮೀಯರು

ಇಲಾಹಿ ಇ. ಜಮಖಂಡಿ
------------------

**ಚಿಮ್ಮಡ :** ರಾಜ್ಯ ಸರಕಾರ ಮಹಿಳೆಯರಿಗಾಗಿ ಜಾರಿಗೊಳಿಸಿರುವ ಗ್ರಹಲಕ್ಷ್ಮೀ ಯೋಜನೆಯಡಿಯಲ್ಲಿ ಪ್ರತೀ ತಿಂಗಳು ಖಾತೆಗೆ ಬರುತ್ತಿರುವ ಎರಡು ಸಾವಿರ ರೂ.ಗಳನ್ನು ಒಂದು ವರ್ಷಗಳ ಕಾಲ ಕೂಡಿಟ್ಟು ಗ್ರಾಮದ ವಿರಕ್ತಮಠಕ್ಕೆ ಅಕ್ಕ ಮಹಾದೇವಿಯವರ ಹೆಸರಿನಲ್ಲಿ ಬ್ರಹತ್ ರಥವನ್ನು ನಿರ್ಮಿಸಿ ಕೊಡಲು ಇಲ್ಲಿನ ಮಹಿಳೆಯರು ಮುಂದಾಗಿದ್ದಾರೆ.





ಬಾಗಲಕೋಟ ಜಿಲ್ಲೆ ರಬಕವಿ-ಬನಹಟ್ಟಿ ತಾಲೂಕಿನ ಚಿಮ್ಮಡ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಕ್ಕ ಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕುಲವಳ್ಳಿ ಸುಕುಮಾರ ಯೋಗಾಶ್ರಮದ ಓಂ ಗುರೂಜಿಯವರು ಗ್ರಾಮದಲ್ಲಿ ಅಕ್ಕ ಮಹಾದೇವಿ ರಥ ನಿರ್ಮಿಸುವಂತೆ ಪ್ರಸ್ಥಾಪಿಸಿದರು, ಇದಕ್ಕೆ ದನಿಗೂಡಿಸಿದ ಶೇಗುಣಶಿ ವಿರಕ್ತಮಠದ ಡಾ. ಮಹಾಂತ ಮಹಾಸ್ವಾಮಿಗಳು ಹಾಗೂ ಕೊಣ್ಣೂರ ಕಲ್ಯಾಣ ಹೊರಗಿನಮಠದ ಡಾ. ವಿಶ್ವಪ್ರಭು ಶಿವಾಚಾರ್ಯರು ಮಹಿಳೆಯರು ಮನಸ್ಸು ಮಾಡಿದರೆ ರಥ ನಿರ್ಮಾಣ ಕಷ್ಟವೇನಲ್ಲ ಹೇಗೋ ಸರಕಾರ ಮನೆಯೊಡತಿಗೆ ಪ್ರತೀ ತಿಂಗಳು ಎರಡು ಸಾವಿರ ನೀಡುತ್ತಿದೆ ಕೇವಲ ಒಂದು ವರ್ಷದ ಹಣ ಕೂಡಿಟ್ಟರೆ ಇಪ್ಪತ್ನಾಲ್ಕು ಸಾವಿರ ಆಗುತ್ತದೆ ಇಲ್ಲಿ ನೆರೆದಿರುವ ಮಹಿಳೆಯರಷ್ಟೆ ಮನಸ್ಸು ಮಾಡಿದರೂ ಒಂದೇ ವರ್ಷದಲ್ಲಿ ರಥ ನಿರ್ಮಾಣವಾಗುತ್ತದೆ, ಇದಕ್ಕೆ ಸಮ್ಮತಿಸಿದವರು ಕೈ ಎತ್ತುವ ಮೂಲಕ ಖಚಿತ ಪಡಿಸಬೇಕೆಂದರು. ಬಹುತೇಕ ಮಹಿಳೆಯರು ಕೈ ಎತ್ತುವ ಮೂಲಕ ಸಹಮತ ವ್ಯಕ್ತಪಡಿಸಿದರು.

ಇದರಿಂದ ಪ್ರೇರಿತರಾಗಿ ಕಾರ್ಯಕ್ರಮದಲ್ಲಿ ಸನ್ಮಾನಿತರಾಗಿ ಆಗಮಿಸಿದ್ದ ಜಮಖಂಡಿ ಸರಕಾರಿ ಪದವಿ ಮಹಾವಿದ್ಯಾಲಯದ ಹಿರಿಯ ಪ್ರಾದ್ಯಾಪಕಿ ಡಾ; ಸುನಂದಾ ಶಿರೂರರವರು ರಥ ನಿರ್ಮಾಣಕ್ಕೆ ತಾವೂ ಒಂದು ಲಕ್ಷ ರೂ ನೀಡುವುದಾಗಿ ವಾಗ್ದಾಣ ಮಾಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ ಜಮಖಂಡಿ ಓಲೆಮಠದ ಶ್ರೀ ಡಾ; ಚನ್ನಬಸವ ಮಹಾಸ್ವಾಮಿಗಳು ಮಾತನಾಡಿ ಮಹಿಳೆಯರ ಈ ಮಾದರೀ ಕಾರ್ಯವನ್ನು ಶ್ಲಾಘಿಸಿ ಹರ್ಷವ್ಯಕ್ತಪಡಿಸಿದರು.

ರಾಮದುರ್ಗ ಶಿವಮೂರ್ತೇಶ್ವರ ಮಠದ ಶಾಂತವೀರ ಮಹಾಸ್ವಾಮಿಗಳು, ಮರೇಗುದ್ದಿ ಅಡವಿಶಿದ್ದೇಶ್ವರ ಮಠದ ಶ್ರೀ ಗುರುಪಾದ ಮಹಾಸ್ವಾಮಿಗಳು, ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು, ಶ್ರೀ ಜನಾರ್ಧನ ಮಹಾರಾಜರು ಈ ಸಂಧರ್ಬದಲ್ಲಿ ಉಪಸ್ಥಿತರಿದ್ದರು.

# ಚಿಮ್ಮಡದಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ



**ಚಿಮ್ಮಡ :** ಗ್ರಾಮದಲ್ಲಿ ಸಾರ್ವತ್ರಿಕ ಚುನಾವಣೆ ಪ್ರಯುಕ್ತ ಸ್ವೀಪ್ ಸಮೀತಿ ಹಾಗೂ ಸ್ಥಳೀಯ ಗ್ರಾಮ ಪಂಚಾಯತಿ ಸಹಯೋಗದೊಂದಿಗೆ ಮತದಾರರ ಜಾಗ್ರತಿ ಅಭಿಯಾನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಇಲ್ಲಿನ ಗ್ರಾಮ ಪಂಚಾಯತಿ ಕಛೇರಿಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪ್ರಜಾಪ್ರಭುತ್ವ ನಮ್ಮಿಂದ, ಮತದಾನ ಮಾಡೋಣ ಹೆಮ್ಮೆಯಿಂದ.

ನಮ್ಮ ನಡೆ ಮತದಾನದ ಕಡೆ ಎಂಬ ಘೋಷಣೆಗಳನ್ನು ಫಲಕ ಹಾಗೂ ಧ್ವನಿವರ್ಧಕಗಳ ಮೂಲಕ ಘೋಷಣೆ ಕೂಗುತ್ತ ಮತದಾರರಲ್ಲಿ ಖಡ್ಡಾಯ ಮತ ಚಲಾವಣೆ ಮಾಡುವ ಕುರಿತು ಜಾಗ್ರತಿ ಮೂಡಿಸಲಾಯಿತು. ಗ್ರಾಮದ ಬಸ್ ನಿಲ್ದಾನದ ವೃತ್ತದ ಭಲೀ ಮತ ಜಾಗ್ರತಿಯ ಬ್ರಹತ್ ರಂಗೋಲಿ ಹಾಕಿಸಲಾಯಿತು, ನಂತರ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರಿಗೆ ಗ್ರಾಮ ಪಂಚಾಯತಿ ಅಭಿವೃದ್ದಿ ಅಧಿಕಾರಿ ಶಿವಾನಂದ ಬಿರಾದರ ಅವರಿಂದ ಮತದಾರರ ಪ್ರತಿಜ್ಞಾವಿಧಿ ಭೋದಿಸಲಾಯಿತು. ನಂತರ ಗ್ರಾಮದ ಪಿಕೆಪಿಎಸ್ ಆವರಣದಲ್ಲಿ ನಡೆಯುವ ವಾರದ ಸಂತೆಯಲ್ಲಿ ಆಗಮಿಸಿದ ವ್ಯಾಪಾರಸ್ಥರೂ ಹಾಗೂ ಗ್ರಾಮಸ್ಥರಿಗೆ ಖಡ್ಡಾಯ ಮತದಾನ ಮಾಡುವ ಕುರಿತ ಜಾಗ್ರತಿಯ ಕರಪತ್ರ ವಿತರಿಸಿ ಮನವಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಸಿಬ್ಬಂದಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ಹಲವಾರು ಜನ ಗ್ರಾಮಸ್ಥರು ಈ ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# 4 ತಿಂಗಳಲ್ಲಿ ಜೈತನಮಾಳ ಸಮಗ್ರ ಅಭಿವೃದ್ಧಿ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

## ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಸಚಿವರಿಂದ ಮತ ಸಂಚಾರ: ಅದ್ದೂರಿಯಾಗಿ ಸ್ವಾಗತಿಸಿದ ನಾಗರಿಕರು

**ಬೆಳಗಾವಿ :** ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಜಯ ದಾಖಲಿಸಿದರೆ ಜೈತನಮಾಳವನ್ನು ದತ್ತು ಸ್ವೀಕರಿಸಿ, ಸಮಗ್ರವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಜೈತನ್ ಮಾಳದಲ್ಲಿ ಚುನಾವಣಾ ಪ್ರಚಾರ ನಡೆಸಿದ ಸಚಿವರು, ಇಲ್ಲಿರುವ ಅವ್ಯವಸ್ಥೆ ನೋಡಿ ನಿಜಕ್ಕೂ ಬೇಸರ ಉಂಟಾಯಿತು. ಕನಿಷ್ಠ ಮೂಲಭೂತ ಸೌಕರ್ಯಗಳನ್ನೂ ಒದಗಿಸಲು ಈ ಭಾಗದ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಜೈತನ್ ಮಾಳ ಜನರು ಎದುರಿಸುತ್ತಿರುವ ಮೂಲಭೂತ ಸೌಕರ್ಯಗಳ ಕೊರತೆ ನೋಡಿ ಮರುಕ ಉಂಟಾಯಿತು. ಮೃಣಾಲ್ ಹೆಬ್ಬಾಳ್ಕರ್ ಆರಿಸಿ ಬಂದರೆ ಕೇವಲ ನಾಲ್ಕು ತಿಂಗಳಲ್ಲಿ ಅಭಿವೃದ್ಧಿ ಮಾಡಲಾಗುವುದು. ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಅವರನ್ನು ಬೆಂಬಲಿಸಬೇಕು ಎಂದು ಸಚಿವರು ಮನವಿ ಮಾಡಿದರು.

**ಜುನೆ ಬೆಳಗಾವಿಯಲ್ಲಿ ಅದ್ದೂರಿ ಸ್ವಾಗತ :** ಬಳಿಕ ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಜುನೆ (ಹಳೇ) ಬೆಳಗಾವಿಯಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಚಾರ ನಡೆಸಿದರು. ಸ್ಥಳೀಯ ಮಹಿಳೆಯರು ಆರತಿ ಬೆಳಗಿ ಸಚಿವರನ್ನು ಸ್ವಾಗತಿಸಿದರು. ಹಳೇ ಬೆಳಗಾವಿ ನಾಕಾದಿಂದ ಕಲ್ಲಪ್ಪ ದೇವಸ್ಥಾನದವರೆಗೆ ಸಚಿವರೊಂದಿಗೆ ನೂರಾರು ಮಹಿಳೆಯರು ಹೆಜ್ಜೆ ಹಾಕಿದರು. ಚೌಡಿಗಲ್ಲಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಜೊತೆಗೂಡಿ ಸಚಿವರು ಪ್ರಚಾರ ನಡೆಸಿದರು. ಈ ವೇಳೆ ದೇವದಾಸ್ ಕನ್ನುಕರ್, ಕಾರ್ಪೋರೇಟರ್ ಲಕ್ಷ್ಮೀ ಲೋಖರೆ, ಮಲ್ಲಸರ್ಜ ಪಾಟೀಲ್, ತುಕರಾಮ್ ಹೊಸುರಕರ, ನೈ.ವೈ.ಕನ್ನುಕರ್, ಡಾ.ಸುಕೀರ್ತ್ ನಾರಾಯಣ್ ಭಂಡಾರಿ, ಮಾಧುರಿ ಜಾಧವ್, ಮುತ್ತುರಾಜ್, ನಾಗಪ್ಪ, ಯಲ್ಲಪ್ಪ ಗುಜನಾಳ, ಚಂದ್ರು, ಶಬ್ಬೀರ್, ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.



## ಶ್ರೀಮತಿ ಸರ್ವಮಂಗಲಾ ಈಶ್ವರಪ್ಪ ಜಿಗಜಿನ್ನಿ ನಿಧನ



**ರಬಕವಿ:** ಇಲ್ಲಿಯ ಬಣಜಿಗ ಸಮಾಜದ ಹಿರಿಯರಾಗಿದ್ದ, ಶ್ರೀಮತಿ ಸರ್ವಮಂಗಲಾ ಈಶ್ವರಪ್ಪ ಜಿಗಜಿನ್ನಿ ಅವರು (ಉದಯ ಮತ್ತು ಈರಣ್ಣ ಜಿಗಜಿನ್ನಿ ಅವರ ತಾಯಿ ) ತಮ್ಮ ೮೦ ನೆಯ ವಯಸ್ಸಿನಲ್ಲಿ ಏಪ್ರೀಲ್ ೨೭ ರಂದು ನಿಧನರಾದರು. ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು , ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ ಎಂದು 'ಧಡಲ್ ಬಾಜಿ'ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

# ಕೇಂದ್ರ ನಾಲ್ಕಾನೆಯಷ್ಟೂ ಬರ ಪರಿಹಾರ ನೀಡಿಲ್ಲ: ಸಿದ್ರಾಮಯ್ಯ

**ರಬಕವಿ-ಬನಹಟ್ಟಿ :** ಕೇಂದ್ರಕ್ಕೆ ರಾಜ್ಯದ ಬರ ಪರಿಹಾರಕ್ಕೆಂದು 18,172 ಕೋಟಿ ರೂ.ಗಳಷ್ಟು ಒದಗಿಸಬೇಕಾಗಿದ್ದ ಬರ ಪರಿಹಾರದಲ್ಲಿ ಕೇವಲ 3,498 ಕೋಟಿ ರೂ. ಗಳಷ್ಟು ಮಾತ್ರ ಒದಗಿಸಿದೆ. ಇದರ ವಿರುದ್ಧ ಇಂದು ರವಿವಾರ ಬೆಂಗಳೂರಿನಲ್ಲಿ ಡಿ.ಕೆ. ಶಿವಕುಮಾರ ಜೊತೆಗೆ ಕಾಂಗ್ರೆಸ್ ಪಕ್ಷದಿಂದ ಬೃಹತ್ ಪ್ರತಿಭಟನೆ ನಡೆಸಲಾಗುವದೆಂದು ಸಿಎಂ ಸಿದ್ರಾಮಯ್ಯ ಸ್ಪಷ್ಟಪಡಿಸಿದರು.




ಬಾಗಲಕೋಟೆ ಜಿಲ್ಲೆ ಬನಹಟ್ಟಿಯ ಎಸ್‌ಆರ್‌ಎ ಮೈದಾನದಲ್ಲಿ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ನಂತರ ಬರ ಪರಿಹಾರವನ್ನು ಕಟಾಚಾರಕ್ಕೆ ನೀಡಿದೆ. ನ್ಯಾಯಾಲಯಕ್ಕೂ ಗೌರವ ನೀಡದ ಬಿಜೆಪಿ ಸರ್ಕಾರದ ವರ್ತನೆಗೆ ಖಂಡನೆಯೆಂದು ಸಿದ್ರಾಮಯ್ಯ ಕೇಂದ್ರದ ವಿರುದ್ಧ ಕಿಡಿಕಾರಿದರು.

10 ವರ್ಷಗಳ ಭರವಸೆ ಸರ್ಕಾರ: ಕೇಂದ್ರ ಸರ್ಕಾರ ಕಳೆದ 10 ವರ್ಷಗಳಿಂದ ಬರೀ ಭರವಸೆಗಳಿಂದಲೇ ದೇಶದ 140 ಕೋಟಿ ಜನರ ಕಣ್ಣಿಗೆ ಮಣ್ಣೆರೆಚುವ ಕಾರ್ಯದಲ್ಲಿದೆ. ವಿದೇಶಿ ಕಪ್ಪು ಹಣದಲ್ಲಿ ಕಾಂಗ್ರೆಸ್ ಹಾಗು ದೇಶದ ಶ್ರೀಮಂತರ ಹಣವಿದೆ. ಅದನ್ನು ತಂದು ತಲಾ 15 ಲಕ್ಷ ಎಲ್ಲರ ಖಾತೆಗೆ ಹಾಕುವದಾಗಿ ಹೇಳಿದ್ದರು. 15 ರೂ. ಗಳನ್ನೂ ಹಾಕಿಲ್ಲ. ಡಿಸೈಲ್, ಪೆಟ್ರೋಲ್ ಮತ್ತು ಸಿಲಿಂಡರ್ ಬೆಲೆ 10 ವರ್ಷದಲ್ಲಿ ದುಪ್ಪಟ್ಟಾಗಿದೆ ಎಂದರು.

ರೈತರ ಹೋರಾಟ, ಪ್ರತಿಭಟನೆಗೆ ಗಮನಿಸದ ಕಾರಣ 700 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದೇಶದಲ್ಲಿ ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿದೆ. 2 ಕೋಟಿ ಯುವಕರಿಗೆ ಉದ್ಯೋಗ ನೀಡಿದ್ದೆಲ್ಲಿ?. ಉದ್ಯೋಗಕ್ಕಾಗಿ ಅರಸಿ ಹೋದರೆ ಪಕೋಡಾ, ಬೋಂಡಾ ಮಾರಿ ಅಂತಿರುವ ಇಂತಹ ಪ್ರಧಾನಿ ದೇಶದ ಇತಿಹಾಸದಲ್ಲಿಯೇ ಬಂದಿಲ್ಲವೆಂದು ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

**ಗ್ಯಾರಂಟಿ ನಿಶ್ಚಿತ :** ರಾಜ್ಯದ 5 ಗ್ಯಾರಂಟಿ ಸಂಪೂರ್ಣ ಯಶಸ್ವಿಗೊಂಡಿವೆ. ಕೇಂದ್ರದ 20ಗ್ಯಾರಂಟಿಗಳೂ ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದರೆ ನಿಶ್ಚಿತ ನಿಮ್ಮ ಮನೆ ಬಾಗಿಲಿಗೆ ಬರುತ್ತವೆ ಎಂದು ಸಿದ್ರಾಮಯ್ಯ ಗ್ಯಾರಂಟಿಗೆ ವಿಶ್ವಾಸ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಮಾತಾಡಿದರೆ ಸಂವಿಧಾನ ವಿರೋಧಿ ಮಾತು. 140 ಕೋಟಿ ದೇಶದ ಜನರ ರಕ್ಷಣೆಯಾಗಬೇಕಿತ್ತು. ಕೇವಲ ಆರ್‌ಎಸ್‌ಎಸ್ ಅಝೆಂಡಾದೊಂದಿಗೆ ಹಿಂದು-ಮುಸ್ಲಿಂ ಎಂದು ಭಾವನೆಗಳಿಗೆ ಧಕ್ಕೆ ತಂದು ದೇಶ ಒಡೆದು ಹಿಂದೂಸ್ಥಾನ ಮಾಡಲು ಹೊರಟಿದ್ದಾರೆ. ಇದನ್ನೆ ಕಾಂಗ್ರೆಸ್ ಸಹಿಸೋಲ್ಲವೆಂದು ಸಿದ್ರಾಮಯ್ಯ ಕಡಾಖಂಡಿತವಾಗಿ ವಿರೋಧಿಸಿದರು.

ನಾವು ಕೇಳಿದ್ದು ಪರಿಹಾರಕ್ಕೆ ಗ್ಯಾರಂಟಿಗಲ್ಲ: ಕೇಂದ್ರಕ್ಕೆ ಬರ ಪರಿಹಾರಕ್ಕೆಂದು ಹಣ ಕೇಳಿದ್ದೇವೆ ಹೊರತು ಗ್ಯಾರಂಟಿಗಲ್ಲ. ಪಂಚ ಗ್ಯಾರಂಟಿಗೆ ರಾಜ್ಯದ ಸಂಪನ್ಮೂಲವಿದೆ. 50.900 ಕೋಟಿ ರೂ. ಗ್ಯಾರಂಟಿಗೆ ಹಾಗು 68 ಸಾವಿರ ಕೋಟಿ ಅಭಿವೃದ್ಧಿಗಾಗಿ ಬಳಸಲು ಸಾಮರ್ಥ್ಯವಿದೆ. ಇದನ್ನು ತಿರುಚಿ ಹೇಳಿಕೆ ನೀಡುತ್ತಿರು ಬಿಜೆಪಿ ನಾಯಕರು ಅರಿತು ಮಾತನಾಡಿಯೆಂದು ಸಿದ್ರಾಮಯ್ಯ ಬಿಜೆಪಿಗರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

**ನಿದ್ದೆಗೌಡರು :** ಸಂಸದ ಗದ್ದಿಗೌಡರು 20 ವರ್ಷ ಕೇಂದ್ರದಲ್ಲಿ ನಿದ್ದೆಯನ್ನೇ ಮಾಡಿದ್ದಾರೆ. ಜಿಲ್ಲೆಗೆ ಯಾವದೇ ಅಭಿವೃದ್ಧಿ ಕಾರ್ಯ ತರುವಲ್ಲಿ ಸಂಪೂರ್ಣ ವಿಫಲಗೊಂಡಿದ್ದು, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಗ್ಯಾರಂಟಿ ಬೆಂಬಲಿಸಿ ಎಂದು ಸಿಎಂ ಮನವಿ ಮಾಡಿಕೊಂಡರು.

**ಜೀತದಾಳಾಗುವೆ :** ಜಿಲ್ಲೆಗೆ ಕುಡಚಿ-ಬಾಗಲಕೋಟೆ ರೈಲು ಕಾಮಗಾರಿ, ಪ್ರವಾಸೋದ್ಯಮ, ನೇಕಾರ ಸಮಸ್ಯೆ, ಕೃಷ್ಣಾ ಮೇಲ್ದಂಡೆ ಹಾಗು ಕಳಸಾ-ಬಂಡೂರಿ ಸೇರಿದಂತೆ ಅನೇಕ ಸಮಸ್ಯೆಗಳು ಮಾರಕವಾಗಿ ಕಾಡುತ್ತಿವೆ. ಇವೆಲ್ಲದಕ್ಕೂ ಸಂಸದ ಗದ್ದಿಗೌಡರ ಅವರ ನಿರ್ಲಕ್ಷ್ಯತನವೇ ಕಾರಣ. ಈ ಬಾರಿ ನನಗೆ ಗೆಲುವಿಗೆ ಸಹಕರಿಸಿದ್ದಲ್ಲಿ ಮುಂದಿನ 5 ವರ್ಷ ಜೀತದಾಳಾಗಿ ಜಿಲ್ಲೆಯ ಸೇವೆ ಮಾಡವದಾಗಿ ಅಭ್ಯರ್ಥಿ ಸಂಯುಕ್ತಾ ಪಾಟೀಲ ಮತದಾರರಿಗೆ ಕೈ ಮುಗಿದು ಮನವಿ ಮಾಡಿದರು. ವೇದಿಕೆ ಮೇಲೆ ಸಚಿವ ಆರ್.ಬಿ. ತಿಮ್ಮಾಪುರ, ಲಕ್ಷ್ಮಣ ಸವದಿ, ವಿನಯ ಕುಲಕರ್ಣಿ, ಶಿವಾನಂದ ಪಾಟೀಲ, ಎಸ್.ಆರ್. ಪಾಟೀಲ, ಉಮಾಶ್ರೀ, ಜೆ.ಟಿ. ಪಾಟೀಲ, ಪ್ರಕಾಶ ಹುಕ್ಕೇರಿ, ವಿಜಯಾನಂದ ಕಾಶಪ್ಪನವರ, ಅಜಯಕುಮಾರ ಸರನಾಯಕ, ಸುನೀಲಗೌಡ ಪಾಟೀಲ, ಆನಂದ ನ್ಯಾಮಗೌಡ, ಬಿ.ಆರ್. ಯಾವಗಲ್, ಎಸ್.ಜಿ. ನಂಜಯ್ಯನಮಠ, ಉಸ್ತುವಾರಿ ಸಯ್ಯದ್ ಸೇರಿದಂತೆ ಅನೇಕರಿದ್ದರು.

# ಕಾಂಗ್ರೆಸ್‌ಗೆ ಮಾದಿಗ ಸಮಾಜ ಬೆಂಬಲ




**ಬಾಗಲಕೋಟೆ :** ಬಾಗಲಕೋಟೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾ ಟೀಲ ಅವರಿಗೆ ಮಾದಿಗ ಸಮಾಜ ಬೆಂಬಲ ವ್ಯಕ್ತಪಡಿಸುತ್ತದೆ ಎಂದು ಮಾದಿಗ ಸಮಾಜದ ರಾಜ್ಯಾಧ್ಯಕ್ಷ ಶಂಕರ ಪೂಜಾರಿ ಹೇಳಿದರು.

ಶುಕ್ರವಾರ ನಗರದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವ ರು, ಮಾದಿಗ ಸಮುದಾಯವು ಲೊ ೀಕಸಭಾ ಚುನಾವಣೆಯಲ್ಲಿ ರಾಜ್ಯ ದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಿ ದ್ದು, ಸುಮಾರು 20 ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲ್ಲಿ ದ್ದಾರೆ ಎಂದರು.

ಬಿಜೆಪಿ ಸರ್ಕಾರ ಅಧಿಕಾರದಲ್ಲಿ ದ್ದಾಗ ನ್ಯಾಯಮೂರ್ತಿ ಸದಾಶಿವ ಆಯೋಗ ವರದಿಯನ್ನು ಜಾರಿಗೆ ಮಾಡದೇ ಅನ್ಯಾಯ ಮಾ ಡಿದೆ. ಬಾಗಲಕೋಟೆ ಲೋಕಸಭಾ ಬಿಜೆಪಿ ಅಭ್ಯರ್ಥಿ ಗದ್ದಿಗೌಡರ ಕಳೆದ 20 ವರ್ಷಗಳಿಂದ ಯಾವುದೇ ಅಭಿವೃ ದ್ಧಿ ಕೆಲಸ ಮಾಡಿಲ್ಲ. ಕ್ಷೇತ್ರಕ್ಕೆ ಅವರು ಯಾವುದೇ ಕೊಡುಗೆ ನೀಡಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಸಂ ಯುಕ್ತಾ ಪಾಟೀಲ ಅವರು ಒಳ್ಳೆಯ ವಿಚಾರ ವನ್ನು ಇಟ್ಟುಕೊಂಡು ಕ್ಷೇತ್ರವನ್ನು ಅಭಿವೃದ್ದಿ ಮಾಡುವ ಸಂಕಲ್ಪ ಹೊಂದಿದ್ದಾರೆ. ಬಾಗಲಕೋಟೆ ಲೋಕಸಭಾ ಕ್ಷೇತ್ರದ ಎಲ್ಲ ನಮ್ಮ ಸಮುದಾಯದವರು ಸಂಯುಕ್ತಾ ಪಾಟೀಲ ಅವರಿಗೆಬೆಂಬಲಿಸಿಗೆಲ್ಲಿಸಬೇಕುಎಂದುಹೇಳಿದರು. ಸುದ್ದಿಗೋಷ್ಠಿಯಲ್ಲಿ ರಾಜು ಮನ್ನಿಕೇರಿ, ವಾಯ್. ವಾಯ್. ತಿ ಮ್ಮಾಪೂರ, ಬಸವರಾಜ ಹೊಸ ಮನಿ, ಯಲ್ಲಪ್ಪ ಪೂಜಾರಿ, ದಶರಥ ಚಿಕ್ಕಸಂಶಿ ಮತ್ತಿತರರು ಇದ್ದರು.

# ಕುರುಹಿನಶೆಟ್ಟಿ ಸೊಸಾಯಿಟಿಗೆ 4.93 ಕೋಟಿ ರೂ. ಲಾಭ

**ಮೂಡಲಗಿ :** ತಾಲೂಕಿನ ಪ್ರತಿಷ್ಠಿತ ಕುರುಹಿನಶೆಟ್ಟಿ ಅರ್ಬನ್ ಕೋ-ಆಫ್.ಕ್ರೆಡಿಟ್ ಸೊಸಾಯಿಟಿಯು ಮಾರ್ಚ ಅಂತ್ಯಕ್ಕೆ 4.93 ಕೋಟಿ ರೂ. ಲಾಭ ಗಳಸಿದೆ ಮತ್ತು ಕಳೆದ ವರ್ಷದಕಿಂತ 86 ಲಕ್ಷ ಹೆಚ್ಚು ಲಾಭ ಗಳಿಸಿ ಪ್ರಗತಿ ಸಾಧಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಬಸಪ್ಪ ಚಿ ಮುಗಳಖೋಡ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಶನಿವಾರ ಸಂಘದ ಸಭಾಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ 10 ಸಾವಿರದಿಂದ ಲಕ್ಷವರೆಗಿನ ಸಾಲಗಾರರಿಗೆ ವಿಮೆಯ ಸೌಲಭ್ಯ ಒದಗಿಸುವ ಸಂಕಲ್ಪ ಇದೆ ಮುಂದಿನ ದಿನದಲ್ಲಿ ಕಾನೂನು ಸಲಹೆ ಪಡೆದು ಇದನ್ನು ಕಾರ್ಯರೂಪಕ್ಕೆ ತರಲಾಗುವದು ಎಂದ ಅವರು ತುಕ್ಕಾನ 'ಟ್ಟಿ,ತೇರದಾಳ,ರಾಮದುರ್ಗಗಳಲ್ಲಿರುವ ಶಾಖೆಗಳ ನೂತನ ಕಟ್ಟಡಗಳ ಉದ್ಘಾಟನೆಯನ್ನು ಸದ್ಯದಲ್ಲಿ ಮಾಡಲಾಗುವದು, ಮಹಾಲಿಂಗಪೂರ ಶಾಖೆಯು ಸ್ವತ್ತ ಕಟ್ಟಡದಲ್ಲಿ ನೀನ್ನೆ ದಶಮಾನೋತ್ಸವ ಆಚರಿಕೊಂಡಿತ್ತು,ಪ್ರತಿ ತಿಂಗಳು ಸಾಲದ ಕಂತು ಸಾಲವನ್ನು ತುಂಬಿದ ಗ್ರಾಹಕರಿಗೆ 1 ಪ್ರತಿಶತ ಬಡ್ಡಿಯನ್ನು ಕಡಿಮೆ ಮಾಡಲಾಗುವದು, ಪ್ರಸತ್ತ ಸಾಲಿನಲ್ಲಿ ಇನ್ನೂ 5 ಶಾಖೆಗಳನ್ನು ಪಾರಂಭಿಸುವ ಉದ್ದೇಶ ಇದೆ ಎಂದರು




ಹಿರಿಯ ನಿರ್ದೇಶಕ ಸುಭಾಸ ಬೆಳಕೂಡ ಮಾತನಾಡಿ, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಸೇರಿ 230 ಜನರಿಗೆ 3 ಲಕ್ಷದಷ್ಟು ಜೀವವಿಮಾ ಮಾಡಿಸಲಾಗಿದೆ, ಮಾರ್ಚ ಅಂತ್ಯಕ್ಕೆ ಸಂಘವು 90ರಷ್ಟು ಬಡ್ಡಿ ವಸೂಲಾತಿಯಾಗಿದೆ, ಒಟ್ಟು 14 ಶಾಖೆಗಳನ್ನು ಹೊಂದಿದ್ದು ಎಲ್ಲಾ ಶಾಖೆಗಳು ಲಾಭ ಹೊಂದಿ ಪ್ರಗತಿ ಪಥದಲ್ಲಿ ಮುನ್ನುಗುತ್ತಿವೆ.

ಸಂಘದ ಪ್ರಧಾನ ವ್ಯವಸ್ಥಪಕ ರಮೇಶ ವಂಟಗೋಡಿ ಮಾತನಾಡಿ,ಸಂಘವು ಮಾರ್ಚ ಅಂತ್ಯಕ್ಕೆ 3.90 ಕೋಟಿ ಶೇರು ಬಂಡವಾಳ, 22.22 ಕೋಟಿ ನಿಧಿಗಳು, ಸಾರ್ವಜನಿಕ ವಲಯದಿಂದ 230 ಕೋಟಿ ರೂ. ಠೇವು ಸಂಗ್ರಹ, ತನ್ನ ಸದಸ್ಯರಿಗೆ 162 ಕೋಟಿ ರೂ. ವಿವಿಧ ರೀತಿಯ ಸಾಲ ವಿತರಿಸಿದೆ. ಠೇವಣಿ ಭದ್ರತೆಗಾಗಿ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ 77.94 ಕೋಟಿ ರೂ. ಠೇವಣೆ ಇಡಲಾಗಿದೆ. ಮಾರ್ಚ ಅಂತ್ಯಕ್ಕೆ 269 ಕೋಟಿ ರೂ ದುಡಿಯುವ ಬಂಡವಾಳ ಹೊಂದಿ ಮಾರ್ಚ ಅಂತ್ಯಕ್ಕೆ 4.93 ಕೋಟಿ ರೂ. ಲಾಭ ಗಳಸಿ ಪ್ರಗತಿ ಸಾಧಿಸುತ್ತಿದೆ ಎಂದರು,

ಬೆಳ್ಳಿ ಹಬ್ಬವನ್ನು ಬಹಳ ಅದ್ದೂರಿಯಾಗಿ ಆಚರಿಸಲಾಗಿದ್ದು ಮುಂದಿನ ದಿನದಲ್ಲಿ ಪ್ರತಿಭಾವಂತ ಸಾಧಕರನ್ನು ಸನ್ಮಾನಿಸುವ ಸಮಾಜಕ್ಕೆ ಪರಿಚಯಸುವ ಕಾರ್ಯ ಕೈಗೊಳ್ಳಲಾಗುವದು ಎಂದರು, ಎಲ್ಲಾ ಶಾಖೆಗಳಿಗೂ ಸ್ವತ್ತ ಕಟ್ಟದ ಹೊಂದಬೇಕು ಎಂಬ ಸಂಕಲ್ಪ ಹೊಂದಲಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಲಕ್ಕಪ್ಪ ಪೂಜೇರಿ ನಿರ್ದೇಶಕರಾದ ಗೊಡಚೆಪ್ಪ ಮುರಗೋಡ, ಬಸವರಾಜ ಬೆಳಕೂಡ,ಇಸ್ಮಾಯಿಲ್ ಕಳ್ಳಿಮನಿ, ವಿಶಾಲ ಶೀಲವಂತ,ಮಾಲಾ ಬೆಳಕೂಡ,ಮಾಹಬೂಬಿ ಕಳ್ಳಿಮನಿ,ಉಮಾ ಬೆಳಕೂಡ,ಶಾಂತವ್ವ ಬೋರಗಲ್, ಶ್ಯಾಲನ್ ಕೊಡತೆ ಉಪಸ್ಥಿತರಿದ್ದರು.

# ತಾಲೂಕು ಕಸಾಪ ನೂತನ ಅಧ್ಯಕ್ಷರಾಗಿ ಬಿ ಪ್ರಕಾಶ್ ಮೂರ್ತಿ ನೇಮಕ

## ನಿಕಟಪೂರ್ವ ಅಧ್ಯಕ್ಷರಾದ ಪ್ರದೀಪ್ ಕುಮಾರ್ ರಾಜೀನಾಮೆ

**ನೆಲಮಂಗಲ :** ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರನ್ನಾಗಿ, ಉತ್ತಮ ಸಂಘಟಕ, ಸ್ನೇಹಜೀವಿ, ಸಾಹಿತಿ, ಕಲಾವಿದ, ಛಾಯಾಗ್ರಾಹಕ, ಕನ್ನಡ ಪ್ರೇಮಿ ಹಾಗೂ ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿಯಾಗಿದ್ದ ಬಿ ಪ್ರಕಾಶ್ ಮೂರ್ತಿ ಯವರನ್ನು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಸಾಪ ಅಧ್ಯಕ್ಷರಾದ ಬಿ ಎನ್ ಕೃಷ್ಣಪ್ಪನವರು ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶಪತ್ರ ನೀಡಿದ್ದಾರೆ ಮತ್ತು ಪರಿಷತ್ತಿನ ನಿಬಂಧನೆಗಳಿಗುಣವಾಗಿ ಉತ್ತಮವಾಗಿ ಕಾರ್ಯಕ್ರಮಗಳನ್ನು ಆಯೋಜಿಸಿರೆಂದು ಶುಭ ಹಾರೈಸಿ, ಅಭಿನಂದಿಸಿ, ಸನ್ಮಾನಿಸಿದರು

ಇಲ್ಲಿಯವರೆಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಉತ್ತಮ ಸಂಘಟಕರಾಗಿ, ಯಶಸ್ವಿ ಸಾಹಿತ್ಯ ಸಮ್ಮೇಳನ ನಡೆಸಿ, ಎಲ್ಲರ ಪ್ರಶಂಸೆಗೆ ಪಾತ್ರರಾಗಿ, ಪರಿಷತ್ತಿನ ಕಾರ್ಯಕ್ರಮಗಳನ್ನು ಅತ್ಯುತ್ತಮವಾಗಿ ಹಮ್ಮಿಕೊಂಡು ಸಾಕಾರಗೊಳಿಸಿದ ಪ್ರದೀಪ್ ಕುಮಾರ್ ಅವರು ಪೂರ್ವ ನಿರ್ಧರಿತ ತೀರ್ಮಾನದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ರಾಜೀನಾಮೆ ಸ್ವೀಕರಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಸಾಪ ಅಧ್ಯಕ್ಷರಾದ ಬಿ ಎನ್ ಕೃಷ್ಣಪ್ಪನವರು 'ಇನ್ನೂ ಮುಂದೆಯೂ ಸಹ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿ,ಶ್ರೀಯುತರ ಪ್ರೀತಿ, ವಿಸ್ವಾಸ, ಅಭಿಮಾನ,

ಸ್ನೇಹ ನಮ್ಮ ಪರಿಷತ್ತಿನ ಕಾರ್ಯಕ್ರಮಗಳಿಗೆ ಸದಾ ಹೀಗೆ ಇರಲಿ' ಎಂದು ಆಶಿಸಿ, ಅಭಿನಂದಿಸಿ, ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ದೇವನಹಳ್ಳಿಯ ಜಿಲ್ಲಾ ಕಸಾಪ ಕೇಂದ್ರದಲ್ಲಿ ನಡೆದ ಸಮಾರಂಭದಲ್ಲಿ ಕೋಶಾಧ್ಯಕ್ಷರಾದ ಅಪ್ಪಣ್ಣ, ಬೆಂ. ಗ್ರಾ. ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ರಬ್ಬನಹಳ್ಳಿ ಕೆಂಪಣ್ಣ, ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್, ಪ್ರಾಧ್ಯಾಪಕ ಮತ್ತು ಚಿಂತಕ ಗಂಗರಾಜು, ಕವಿ ಡಾ. ಸದಾನಂದ ಆರಾಧ್ಯ, ತಾಲೂಕು ಕ.ಸಾ.ಪ ಮಾಜಿ ಅಧ್ಯಕ್ಷರಾದ ಲಯನ್ ಪ್ರಕಾಶ್, ಲೇಖಕರಾದ ಶರಣಯ್ಯ ಹಿರೇಮಠ್ ಉಪಸ್ಥಿತರಿದ್ದರು. ಕಸಾಪ ಜಿಲ್ಲಾ ಪ್ರತಿನಿಧಿ ರಾಮಕೃಷ್ಣಪ್ಪ, ಕೋಶಾಧ್ಯಕ್ಷರಾದ ನಾರಾಯಣಗೌಡ, ಕಸಾಪ ಪದಾಧಿಕಾರಿಗಳು, ಸಂಘ ಸಂಸ್ಥೆಗಳ ಮುಖಂಡರು ಮತ್ತು ಇತರೆ ಗಣ್ಯರು ನೂತನ ಅಧ್ಯಕ್ಷರಿಗೆ ಶುಭಕೋರಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State